ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 5 ಸಂಚಿಕೆ 9 ಸೆಪ್ಟೆಂಬರ್ 2020



ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 29.8.2020 ರಂದು ನಡೆದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೇ ಜಯಂತಿಯನ್ನು ಕೇಂದ್ರ ರಕ್ಷಣಾ ಸಚಿವರಾದ ಶ್ರೀ ರಾಜನಾಥ್ ಸಿಂಗ್‌ರವರು ಆನ್‌ಲೈನ್ ಮೂಲಕ ಉದ್ಘಾಟಿಸಿದ ಸಂದರ್ಭದಲ್ಲಿ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್, ಅಡಗೂರು ಶ್ರೀ ಎಚ್. ವಿಶ್ವನಾಥ್, ಶ್ರೀ ಪ್ರತಾಪ್ ಸಿಂಹ, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಪ್ರೊ. ಎಸ್.ಪಿ. ಮಂಜುನಾಥ್, ಡಾ. ಸಿ.ಜಿ. ಬೆಟಸೂರಮಠ ಮೊದಲಾದವರಿದ್ದಾರೆ



ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಆನ್‌ಲೈನ್ ಮೂಲಕ ಪಾಲ್ಗೊಂಡ ಮಾಜಿ ಪ್ರಧಾನಿ ಶ್ರೀ ಎಚ್.ಡಿ. ದೇವೇಗೌಡರು



ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಕಾರ್ಯಕ್ರಮದಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು ಅನಿಮೇಷನ್ ಚಿತ್ರಗಳನ್ನು ಆನ್‌ಲೈನ್ ಮೂಲಕ ಬಿಡುಗಡೆಗೊಳಿಸಿದ ಸಂದರ್ಭದಲ್ಲಿ ಸಂಸದರಾದ ಶ್ರೀ ಸುರೇಶ್ ಅಂಗಡಿ ಮತ್ತಿತರರು



ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಕಾರ್ಯಕ್ರಮದಲ್ಲಿ ಪ್ರಸಾದ ವಿಶೇಷ ಸಂಚಿಕೆಯನ್ನು ಆನ್‌ಲೈನ್ ಮೂಲಕ ಬಿಡುಗಡೆ ಮಾಡಿದ ಉಪ ಮುಖ್ಯಮಂತ್ರಿಗಳಾದ ಡಾ. ಅಶ್ವತ್ಥನಾರಾಯಣರವರು

# ರಾಜೇಂದ್ರ ಶ್ರೀಗಳ ಜೀವನ ಸಮಾಜಮುಖಿ ಹಾಗೂ ಪ್ರೇರಣದಾಯಕವಾದುದು




ಸುತ್ತೂರು ಮಠದ ರಾಜೇಂದ್ರ ಶ್ರೀಗಳ ಜೀವನ ಮತ್ತು ಸಮಾಜಮುಖಿ ಕಾರ್ಯಗಳು ಪ್ರೇರಣದಾಯಕವಾದಂಥವು ಎಂದು ಕೇಂದ್ರ ರಕ್ಷಣಾ ಸಚಿವರಾದ ಶ್ರೀ ರಾಜನಾಥ್ ಸಿಂಗ್‌ರವರು ಹೇಳಿದರು.

ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ನಡೆದ ದಿನಾಂಕ 29.8.2020ರಂದು ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೇಯ ಜಯಂತಿ ಮಹೋತ್ಸವವನ್ನು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಆನ್‌ಲೈನ್ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು. ಸಮಾಜಕ್ಕೆ ಸುತ್ತೂರು ಶ್ರೀಮಠದ ಕೊಡುಗೆ ಅಪಾರವಾದುದು. ಶಿಕ್ಷಣ ಕ್ಷೇತ್ರದಲ್ಲಿ ಬೃಹತ್ ಪ್ರಮಾಣದಲ್ಲಿ ಹೊಸ ಹೊಸ ಕಾರ್ಯಗಳನ್ನು ಹಮ್ಮಿಕೊಂಡು ಯಶಸ್ವಿಯಾಗಿದೆ. ರಾಜೇಂದ್ರ ಶ್ರೀಗಳು ಮಹಾನ್ ಸಂತರು. ತಮ್ಮ ಜೀವನದುದ್ದಕ್ಕೂ ಸಮಾಜದಲ್ಲಿನ ಬಡವರ ಉದ್ಧಾರಕ್ಕಾಗಿ ಹಲವಾರು ಸಾಮಾಜಿಕ, ಶೈಕ್ಷಣಿಕ ಕಾರ್ಯಗಳನ್ನು ಹಮ್ಮಿಕೊಂಡು ಎಲ್ಲರಿಗೂ ಸ್ಫೂರ್ತಿದಾಯಕವಾಗಿದ್ದರು. ಜೆಎಸ್‌ಎಸ್ ಸಂಸ್ಥೆಗಳು ಶಿಕ್ಷಣ ಕ್ಷೇತ್ರಕ್ಕೆ ಒಂದು ಹೊಸ ಆಯಾಮವನ್ನು ನೀಡಿವೆ. ಸಶಕ್ತ ಭಾರತ ನಿರ್ಮಾಣವಾಗುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತಿವೆ. ಸುತ್ತೂರು ಶ್ರೀಮಠ ಸಾಮಾಜಿಕ ನ್ಯಾಯದ ಉದ್ದೇಶವನ್ನಿಟ್ಟುಕೊಂಡು ಶೈಕ್ಷಣಿಕ ಕ್ಷೇತ್ರ ಸೇರಿದಂತೆ ಎಲ್ಲ ಕ್ಷೇತ್ರಗಳಲ್ಲು ನಿಸ್ವಾರ್ಥ ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಗ್ರಾಮೀಣ ಭಾಗದ ಜನರ ಆರೋಗ್ಯದ ಹಿತದೃಷ್ಟಿಯಿಂದ ಆಸ್ಪತ್ರೆಗಳನ್ನು ನಿರ್ಮಿಸಿ ಸ್ವಸ್ಥ ಭಾರತಕ್ಕಾಗಿ ಶ್ರಮಿಸುತ್ತಿದೆ ಎಂದು ತಿಳಿಸಿದರು.

ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಬಿ.ಎಸ್. ಯಡಿಯೂರಪ್ಪನವರು 'ಸುತ್ತೂರು ಶ್ರೀಮಠ ಗುರುಪರಂಪರೆ' ಮತ್ತು 'ದಿ ಹೆರಿಟೇಜ್ ಆಫ್ ಶ್ರೀ ಸುತ್ತೂರು ಮಠ್' ಅನಿಮೇಷನ್ ಚಿತ್ರಗಳನ್ನು ಬಿಡುಗಡೆಗೊಳಿಸಿ ಸುತ್ತೂರು ಶ್ರೀಮಠವು ಸಮ ಸಮಾಜ ನಿರ್ಮಾಣಕ್ಕೆ ಸಾಕಷ್ಟು ಸೇವೆಯನ್ನು ಸಲ್ಲಿಸುತ್ತಾ ಬಂದಿದೆ. ಅನ್ನ, ಅರಿವು, ಆರೋಗ್ಯ, ಧಾರ್ಮಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಗಳಿಗೆ ರಾಜೇಂದ್ರ ಶ್ರೀಗಳು ಭದ್ರಬುನಾದಿ ಹಾಕಿದ್ದಾರೆ. ಜೆಎಸ್‌ಎಸ್ ಮಹಾವಿದ್ಯಾಪೀಠವನ್ನು ಸ್ಥಾಪಿಸಿ ಶಿಕ್ಷಣ ಕ್ಷೇತ್ರದಲ್ಲಿ ಮಹತ್ಕಾರ್ಯವನ್ನು ಕೈಗೊಂಡರು.

ಶಾಂತಿ ಹಾಗೂ ಸಾಮಾಜಿಕ ಸಾಮರಸ್ಯದ ರೂವಾರಿಗಳಾಗಿ ಪೂಜ್ಯರು ಕಾರ್ಯ ನಿರ್ವಹಿಸಿದ್ದಾರೆ ಎಂದು ಹೇಳಿದರು.

ವಿರೋಧ ಪಕ್ಷದ ನಾಯಕರಾದ ಶ್ರೀ ಸಿದ್ಧರಾಮಯ್ಯನವರು 'ಕಾಯಕ ತಪಸ್ವಿ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಾರು', 'ಭಕ್ತಿಭಂಡಾರಿ ಬಸವೇಶ್ವರರಿನ್ ವಸನಂಗಳ್' ಮತ್ತು 'ನೀತಿ ಸಾಮ್ರಾಜ್ಯ ಶತಕ' ಕೃತಿಗಳನ್ನು ಲೋಕಾರ್ಪಣೆ ಮಾಡಿ ರಾಜೇಂದ್ರ ಶ್ರೀಗಳು ದೂರದೃಷ್ಟಿಯುಳ್ಳವರಾಗಿದ್ದರು. ಶಿಕ್ಷಣದ ಮಹತ್ವ ಅರಿತಿದ್ದ ಅವರು ಗ್ರಾಮೀಣ ಪ್ರದೇಶದಲ್ಲಿ ಶಾಲಾ–ಕಾಲೇಜುಗಳನ್ನು ತೆರೆದರು. ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಿ ಸಮಾಜದಲ್ಲಿನ ಲಿಂಗ ತಾರತಮ್ಯವನ್ನು ಹೋಗಲಾಡಿಸಲು ಶ್ರಮಿಸಿದರು. ಶಿಕ್ಷಣ ವಂಚಿತರಿಗೆ ಸಕಲ ಸೌಲಭ್ಯಗಳನ್ನು ಒದಗಿಸಿ ಅವರ ಆಶಾದಾಯಕ ಶಕ್ತಿಯಾಗಿದ್ದರು ಎಂದು ಹೇಳಿದರು.

ಉಪಮುಖ್ಯಮಂತ್ರಿಗಳಾದ ಡಾ. ಸಿ.ಎನ್. ಅಶ್ವತ್ಥ್ ನಾರಾಯಣ್‌ರವರು 'ಪ್ರಸಾದ' ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿ ರಾಜೇಂದ್ರ ಶ್ರೀಗಳ ಸಂದೇಶಗಳನ್ನು ಅನುಸರಿಸಿ ಅವರು ಹಾಕಿಕೊಟ್ಟ ಮಾರ್ಗದಲ್ಲಿ ನಡೆಯಬೇಕು. ಅವರು ಜನರ ಬಹುಮುಖ ಸಾಧನೆಗೆ ಒತ್ತು ನೀಡುವ ಹಲವಾರು ಕಾರ್ಯಗಳನ್ನು ಹಮ್ಮಿಕೊಂಡು ಬಂದಿದ್ದರು. ಗ್ರಾಮೀಣಾಭಿವೃದ್ಧಿಯಲ್ಲಿ ಸುತ್ತೂರು ಶ್ರೀಮಠ ಮಾದರಿಯಾಗಿದೆ. ಜೆಎಸ್‌ಎಸ್ ಸಂಸ್ಥೆ ಗುಣಮಟ್ಟದ ಶಿಕ್ಷಣಕ್ಕೆ ಹೆಸರುವಾಸಿಯಾಗಿದೆ ಎಂದು ಹೇಳಿದರು.

ಸಂಸದರು ಮತ್ತು ಮಾಜಿ ಪ್ರಧಾನಮಂತ್ರಿಗಳಾದ ಶ್ರೀ ಎಚ್.ಡಿ. ದೇವೇಗೌಡರು ಸುತ್ತೂರು ಶ್ರೀಮಠ ಜನರ ಪ್ರೀತಿ–ಭಕ್ತಿ, ಗೌರವಗಳಿಗೆ ಪಾತ್ರವಾಗಿದೆ. ಶ್ರೀಮಠದ ಇಂದಿನ ಎಲ್ಲ ಕಾರ್ಯಸಾಧ್ಯಗಳ ಶ್ರೇಯಸ್ಸು ರಾಜೇಂದ್ರ ಶ್ರೀಗಳಿಗೆ ಸಲ್ಲುತ್ತದೆ. ಪೂಜ್ಯರು ಅವಿರತವಾಗಿ ಕಾಯಕದಲ್ಲಿ ತೊಡಗಿಕೊಂಡು ಸದಾ ಸಮಾಜದ ಒಳಿತಿಗಾಗಿ ದುಡಿದರು. ಶ್ರೀಮಠ ಸಮಾಜದಲ್ಲಿನ ಜಾತಿ–ವರ್ಗಗಳನ್ನು ಮೀರಿ ಸೇವೆ ಸಲ್ಲಿಸುತ್ತಾ ಬಂದಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆದು ಜನಮಾನಸದಲ್ಲಿ ಶಾಶ್ವತವಾಗಿ ನೆಲೆಯೂರಿದೆ ಎಂದು ಹೇಳಿದರು.

ಸಹಕಾರ ಸಚಿವರಾದ ಶ್ರೀ ಎಸ್.ಟಿ. ಸೋಮಶೇಖರ್‌ರವರು ಪ್ರತಿಭಾ ಪುರಸ್ಕಾರ, ವಿದ್ಯಾರ್ಥಿ ವೇತನ ಮತ್ತು ಬಹುಮಾನಗಳನ್ನು ಸಾಂಕೇತಿಕವಾಗಿ ವಿಭಾಗಗಳ ಮುಖ್ಯಸ್ಥರಿಗೆ ವಿತರಿಸಿದರು. ಕೋವಿಡ್–19ರ ಸಂದರ್ಭದಲ್ಲಿ ಶ್ರೀಮಠ ಸಂಕಷ್ಟದಲ್ಲಿದ್ದವರಿಗೆ ಕೈಜೋಡಿಸಿ ಸಹಕರಿಸಿದ್ದನ್ನು ನೆನಪಿಸಿಕೊಂಡರು. ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಡಾ. ಮಲ್ಲೇಪುರಂ ಜಿ. ವೆಂಕಟೇಶ್‌ರವರು ಕೃತಿಗಳ ಪರಿಚಯ ಮಾಡಿ ಗುರುನಮನ ಸಲ್ಲಿಸಿ ಶ್ರೀಗಳ ತಪಶ್ಶಕ್ತಿಯಿಂದ ಲೋಕೋದ್ಧಾರ ಕಾರ್ಯಗಳು ನಡೆಯುತ್ತಿರುವುದನ್ನು ಸ್ಮರಿಸಿದರು.

ಕೇಂದ್ರ ರೈಲ್ವೆ ರಾಜ್ಯ ಸಚಿವರಾದ ಶ್ರೀ ಸುರೇಶ್ ಅಂಗಡಿ, ಮುಖ್ಯಮಂತ್ರಿಗಳ ರಾಜಕೀಯ ಕಾರ್ಯದರ್ಶಿಗಳಾದ ಶ್ರೀ ಶಂಕರಗೌಡ ಪಾಟೀಲ್, ಸಂಸದರಾದ ಶ್ರೀ ಪ್ರತಾಪ್ ಸಿಂಹ, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಅಡಗೂರು ಎಚ್. ವಿಶ್ವನಾಥ್‌ರವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಸುತ್ತೂರು ಶ್ರೀಕ್ಷೇತ್ರದಲ್ಲಿರುವ ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಮಂತ್ರ ಮಹರ್ಷಿಗಳು ಮತ್ತು ರಾಜೇಂದ್ರ ಶ್ರೀಗಳ ಗದ್ದುಗೆಗೆ ವಿಶೇಷ ಪೂಜೆ ಸಲ್ಲಿಸುವುದರೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ನಂತರ ಮೈಸೂರಿನ ಶ್ರೀಮಠದಲ್ಲಿ ಪೂಜ್ಯರ ಪುತ್ಥಳಿಗೆ ಪೂಜೆ, ಆರತಿ ಮತ್ತು ಪುಷ್ಪಾಂಜಲಿ ನಮನ ಸಲ್ಲಿಸಲಾಯಿತು. ಜೆಎಸ್‌ಎಸ್ ಲಲಿತಾಕಲಾ ತಂಡದಿಂದ ಭಕ್ತಿ ಸಂಗೀತ ನೆರವೇರಿತು. ಅನಿಮೇಷನ್ ಚಿತ್ರಗಳ ನಿರ್ದೇಶಕರಾದ ಶ್ರೀ ಅಬ್ದುಲ್ ಕರೀಂರವರನ್ನು ಇದೇ ಸಂದರ್ಭದಲ್ಲಿ ಸನ್ಮಾನಿಸಲಾಯಿತು. ಡಾ. ಸಿ.ಜಿ. ಬೆಟಸೂರಮಠರವರು ಸ್ವಾಗತಿಸಿದರು. ಶ್ರೀ ಬಿ. ನಿರಂಜನಮೂರ್ತಿ ವಂದಿಸಿದರು. ಪ್ರೊ. ಕೆ.ಎಸ್. ಸುರೇಶ್‌ರವರು ಕಾರ್ಯಕ್ರಮವನ್ನು ನಿರೂಪಿಸಿದರು.

ಉದ್ಘಾಟನಾ ಕಾರ್ಯಕ್ರಮದ ನಂತರ ದಿವ್ಯಚೇತನ ನಾಟಕ ಮತ್ತು ಕಾಯಕತಪಸ್ವಿ ನೃತ್ಯರೂಪಕಗಳ ಪ್ರಸಾರವನ್ನು ಆನ್‌ಲೈನ್ ಮೂಲಕ ನೇರಪ್ರಸಾರ ಮಾಡಲಾಯಿತು.

# ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಆಚರಣೆ

ಶ್ರೀಮತ್ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೇ ಜಯಂತಿ ಮಹೋತ್ಸವ ಕಾರ್ಯಕ್ರಮವನ್ನು ದಿನಾಂಕ 29.8.2020 ರಂದು ಜೆಎಸ್‌ಎಸ್ ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಆಚರಿಸಲಾಯಿತು.

ನುಡಿನಮನ ಸಲ್ಲಿಸಿದ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಆರ್. ಸತೀಶ್ ಚಂದ್ರರವರು ಪೂಜ್ಯರು ತಮ್ಮ ಧೀಶಕ್ತಿಯಿಂದ ಸಂಸ್ಥೆಯನ್ನು ಪ್ರಾರಂಭಿಸಿ ಬೆಳೆಸಿದ ರೀತಿ ಅವರ ತ್ಯಾಗ ಜೀವನ, ಕರುಣೆ, ಮಾತೃಹೃದಯಕ್ಕೆ ಸಾಕ್ಷಿಯಾಗಿದೆ. ಬಡವರು ಮತ್ತು ದೀನದಲಿತರ ಬಗ್ಗೆ ಅವರು ಹೊಂದಿದ್ದ ಕಾಳಜಿ ಅಪಾರ. ಶ್ರೀಗಳವರ ಬಗ್ಗೆ ದೇಶದ ಹಾಗೂ ರಾಜ್ಯದ ಮುತ್ಸದ್ಧಿ ರಾಜಕಾರಣಿಗಳು ಮೊದಲ್ಗೊಂಡು ಎಲ್ಲಾ ಧರ್ಮದ ಸಂತರು ಸನ್ಯಾಸಿಗಳು ಅಪಾರವಾದ ಗೌರವವನ್ನು ಹೊಂದಿದ್ದರು. ಬಡವಿದ್ಯಾರ್ಥಿಗಳಿಗೆ ಉಚಿತ ಪ್ರಸಾದನಿಲಯವನ್ನು ಪ್ರಾರಂಭಿಸುವುದರ ಮೂಲಕ ತ್ರಿವಿಧ ದಾಸೋಹಿಗಳು ಹಾಗೂ ಕಾಯಕ ತಪಸ್ವಿಗಳಾದರು. ಶ್ರೀಗಳು ಸಂಸ್ಥಾಪಿಸಿದ ಸಂಸ್ಥೆಗಳು ಅವರ ಕೃಪಾಶೀರ್ವಾದದಿಂದ ಇಂದು ಹೆಮ್ಮರವಾಗಿ ಬೆಳೆದು ದೇಶ ವಿದೇಶಗಳವರೆಗೂ ಪಸರಿಸಿವೆ. ಇದರ ಫಲವಾಗಿ ಶಿಶು ಶಿಕ್ಷಣದಿಂದ ಹಿಡಿದು ತಾಂತ್ರಿಕ, ವೈದ್ಯಕೀಯ ಹಾಗೂ ಉನ್ನತ ಶಿಕ್ಷಣ ಮತ್ತು ಸಂಶೋಧನೆವರೆಗೆ ಸಂಸ್ಥೆಗಳು ಬೆಳೆದಿವೆ ಎಂದು ತಿಳಿಸಿದರು.

ಕಾಲೇಜಿನ ಪ್ರಾಂಶುಪಾಲರಾದ ಡಾ. ಎಚ್. ಬಸವನಗೌಡಪ್ಪರವರು ಪೂಜ್ಯ ಶ್ರೀಗಳವರನ್ನು ಕುರಿತು ಮಾತನಾಡಿ ಪೂಜ್ಯರು ಚಿಕ್ಕವಯಸ್ಸಿನಲ್ಲಿಯೇ ಶ್ರೀಮಠದ ಜವಾಬ್ದಾರಿಯನ್ನು ವಹಿಸಿಕೊಂಡು ಬಡ ವಿದ್ಯಾರ್ಥಿಗಳಿಗೆ ಉಚಿತ ಪ್ರಸಾದನಿಲಯಗಳನ್ನು ಪ್ರಾರಂಭಿಸುವುದರ ಮೂಲಕ ಅಕ್ಷರ, ಅನ್ನದಾಸೋಹವನ್ನು ಬೆಸೆದರು. ಅವರ ತ್ಯಾಗಮಯ ಜೀವನ, ಸಾಮಾಜಿಕ ಕಳಕಳಿ ಅಪಾರವಾದುದು. ಪೂಜ್ಯರ ಆಶೀರ್ವಾದದಿಂದ ಇಂದು ಜೆಎಸ್‌ಎಸ್ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ನಾವೆಲ್ಲರೂ ಭಾಗ್ಯಶಾಲಿಗಳು. ಅವರ ಆಶಯದಂತೆ ಸಂಸ್ಥೆಯನ್ನು ಇನ್ನು ಉತ್ತಮ ಮಟ್ಟಕ್ಕೆ ಕೊಂಡೊಯ್ಯಲು ಪರಿಶ್ರಮಿಸಿ ಕರ್ತವ್ಯ ನಿರ್ವಹಿಸಬೇಕಾಗಿದೆ. ಇಂದಿನ ಜಗದ್ಗುರುಗಳಾದ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು, ಅಂದು ಶ್ರೀಗಳು ಪ್ರಾರಂಭಿಸಿದ ಸಂಸ್ಥೆಗಳನ್ನು ಹೆಮ್ಮರವಾಗಿ ಬೆಳೆಸುವುದರ ಜೊತೆಗೆ ರಾಜ್ಯ, ದೇಶ ಹಾಗೂ ಪ್ರಪಂಚದೆಲ್ಲೆಡೆ ಸೇವೆ ಸಲ್ಲಿಸುವಂತೆ ಮಾಡಿದ್ದಾರೆ ಎಂದು ತಿಳಿಸಿದರು.

ಕ್ರೀಡಾ ಮತ್ತು ಸಾಂಸ್ಕೃತಿಕ ವಿಭಾಗದ ಶ್ರೀ ಲೋಕೇಶಪ್ಪ ಅವರು ಪೂಜ್ಯರು ಸಮಾಜದ ಬಡವರು, ದೀನದಲಿತರ ಬಗ್ಗೆ ಅಪಾರ ಕಾಳಜಿ ಉಳ್ಳವರಾಗಿ, ಮಂತ್ರ ಮಹರ್ಷಿಗಳ ಆಶಯದಂತೆ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ರೀತಿ ಭಗವಾನ್ ಬುದ್ಧರ ತ್ಯಾಗಮಯ ಜೀವನಕ್ಕೆ ಸಮ ಎಂದರು.

ಕಛೇರಿ ವಿಭಾಗದ ಶ್ರೀ ಬಿ.ಎಸ್. ಬಸವಣ್ಣನವರು ಮಾತನಾಡಿ ಶ್ರೀಗಳವರು ನಮ್ಮಂತಹ ಬಡವರ ಬಗ್ಗೆ ಅಪಾರ ಕಾಳಜಿಯನ್ನು ಹೊಂದಿದ್ದರು. ಅವರ ದಿವ್ಯ ಆಶೀರ್ವಾದದ ಫಲವಾಗಿ ಇಂದು ನನ್ನ ಮಕ್ಕಳು ಉತ್ತಮ ವಿದ್ಯಾವಂತರಾಗಿದ್ದಾರೆ ಎಂದು ತಿಳಿಸಿದರು.

ಉಪ ಪ್ರಾಚಾರ್ಯರಾದ ಡಾ. ಎಂ.ಎನ್. ಸುಮ, ಶ್ರೀಮತಿ ಇಂದಿರಾ ಮತ್ತು ಶ್ರೀಮತಿ ಲತಾರವರು ಪ್ರಾರ್ಥಿಸಿದರು.

ಕಾರ್ಯಕ್ರಮದಲ್ಲಿ ಕುಲಸಚಿವರು, ಪ್ರಾಚಾರ್ಯರು, ಉಪಪ್ರಾಚಾರ್ಯರು, ಆಡಳಿತಾಧಿಕಾರಿಗಳು, ಸಹಾಯಕ ಆಡಳಿತಾಧಿಕಾರಿಗಳು ಹಾಗೂ ಕಾಲೇಜಿನ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ರೋಗನಿರೋಧಕ ಶಕ್ತಿವರ್ಧಕ ಇಮ್ಯೂನ್ ಕಿಟ್ ಬಿಡುಗಡೆ




ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ಹೊರತಂದಿರುವ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುವ ಕಿಟ್ ಅನ್ನು ಪರಮಪೂಜ್ಯ ಜಗದ್ಗುರುಗಳು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಶ್ರೀ ಆರ್. ಮಹೇಶ್, ಡಾ. ಸಿ.ಜಿ. ಬೆಟಸೂರಮಠ, ಪ್ರಾಂಶುಪಾಲರಾದ ಡಾ. ಸರ್ಬೇಶ್ವರ್‌ಕರ್, ಡೀನ್ ಡಾ. ರಾಜೇಶ್ ಉಡುಪುಡಿ, ಶ್ರೀ ಎಸ್. ಶಿವಕುಮಾರಸ್ವಾಮಿ ಹಾಗೂ ಶ್ರೀ ಜಯರಾಜೇಂದ್ರರವರು ಇದ್ದಾರೆ

'ಕೊರೋನಾ ಸೋಂಕು ಇಂದು ಅನೇಕರನ್ನು ಬಾಧಿಸುತ್ತಿದೆ. ಅದು ಬರುವ ಮುನ್ನ ರೋಗ ನಿರೋಧಕ ಶಕ್ತಿ ವೃದ್ಧಿಸಿಕೊಳ್ಳುವುದು ಬಹಳ ಮುಖ್ಯ' ಎಂದು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ದಿನಾಂಕ 10.8.2020ರಂದು ಮೈಸೂರಿನ ಸುತ್ತೂರು ಶ್ರೀಮಠದ ಆವರಣದಲ್ಲಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ಸಿದ್ಧಪಡಿಸಿರುವ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುವ ಗುಣಮಟ್ಟದ ಕಿಟ್ ಅನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ತಿಳಿಸಿದರು. 'ಗಿಡಮೂಲಿಕೆ ಸಸ್ಯಗಳಿಂದ ತಯಾರಾಗುವ ಆಯುರ್ವೇದ ಔಷಧಿಗಳ ಬಳಕೆ ಪ್ರಾಚೀನ ಕಾಲದಿಂದಲೂ ಇದೆ. ಯಾವುದೇ ಅಡ್ಡಪರಿಣಾಮಗಳಿಲ್ಲದೆ ಆಯುರ್ವೇದ ಔಷಧಿಯಿಂದ ರೋಗದಿಂದ ಮುಕ್ತರಾಗಲು ಸಾಧ್ಯವಿದೆ' ಎಂದು ತಿಳಿಸಿದರು.

ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯ ಸ್ಥಾನಿಕ ವೈದ್ಯಾಧಿಕಾರಿಗಳಾದ ಡಾ. ಎನ್. ಕೃಷ್ಣಪ್ರಸಾದ್ ಹಾಗೂ ಪ್ರಾಂಶುಪಾಲರಾದ ಡಾ. ಸರ್ಬೇಶ್ವರ್‌ಕರ್‌ರವರು ಒಂದನೇ ಕಿಟ್‌ಗಳ ಪರಿಚಯ ಮಾಡಿ ಅವುಗಳಲ್ಲಿರುವ ರೋಗನಿರೋಧಕ ಶಕ್ತಿ ಹಾಗೂ ಅದನ್ನು ಉಪಯೋಗಿಸುವ ಬಗೆಯನ್ನು ತಿಳಿಸಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಇದರ ಉಪಯೋಗದಿಂದ ಉತ್ತಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶ್ರೀ ಜಯರಾಜೇಂದ್ರರು, ಕಾರ್ಯದರ್ಶಿಗಳಾದ ಶ್ರೀ ಎಸ್. ಶಿವಕುಮಾರಸ್ವಾಮಿ, ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್, ಆಯುರ್ವೇದ ವೈದ್ಯಕೀಯ ಆಸ್ಪತ್ರೆಯ ಡೀನ್ ಡಾ. ರಾಜೇಶ್ ಉಡುಪುಡಿ ಹಾಗೂ ಇತರರು ಉಪಸ್ಥಿತರಿದ್ದರು.

ಇವುಗಳನ್ನು ಲಲಿತಾದ್ರಿಪುರ ರಸ್ತೆಯಲ್ಲಿರುವ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಎಂ.ಜಿ. ರಸ್ತೆಯಲ್ಲಿನ ಜೆಎಸ್‌ಎಸ್ ಆಸ್ಪತ್ರೆ ಹಾಗೂ ಜೆಎಸ್‌ಎಸ್ ಹಳೆ ಆಸ್ಪತ್ರೆ ಆವರಣದಲ್ಲಿನ ಜೆಎಸ್‌ಎಸ್ ಜನೌಷಧ ಕೇಂದ್ರಗಳಲ್ಲಿ ಈ ಕಿಟ್‌ಗಳನ್ನು ಪಡೆಯಬಹುದಾಗಿದೆ ಎಂದು ತಿಳಿಸಿದರು.

## ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಮಹೋತ್ಸವ ಹಾಗೂ ವಚನ ದಿನ ಆಚರಣೆ

ದಿನಾಂಕ 29.8.2020 ರಂದು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಚಾಮರಾಜನಗರ ಜಿಲ್ಲಾ ಘಟಕದ ವತಿಯಿಂದ ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜು ಹಾಗೂ ರೋಟರಿ ಸಂಸ್ಥೆ ಸಹಯೋಗದೊಂದಿಗೆ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಸಂಸ್ಥಾಪನಾ ದಿನ ಹಾಗೂ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜನ್ಮದಿನವನ್ನು ಆಚರಿಸಲಾಯಿತು. ಚಾಮರಾಜನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿಯವರು ಸಮಾರಂಭವನ್ನು ಜ್ಯೋತಿ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಪೂಜ್ಯರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಸಲ್ಲಿಸಿದರು. ಕೋವಿಡ್–19ರ ಹಿನ್ನಲೆಯಲ್ಲಿ ಅತ್ಯಂತ ಸರಳವಾಗಿ, ಮುನ್ನೆಚ್ಚರಿಕಾ ಕ್ರಮಗಳನ್ನು ಅನುಸರಿಸಿ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ ಎಂದು ತಿಳಿಸುತ್ತಾ, ಶ್ರೀಗಳವರ ಸಾಮಾಜಿಕ ಕಳಕಳಿಯನ್ನು ಸ್ಮರಿಸಿದರು.

ರಾಮಸಮುದ್ರದ ಲಿಂಗೈಕ್ಯ ಶ್ರೀ ಮಲ್ಲಪ್ಪನವರ ಸ್ಮರಣಾರ್ಥ 'ವಚನ ಸಾಹಿತ್ಯ ಮತ್ತು ಜೀವನ ಮೌಲ್ಯಗಳು' ಎಂಬ ವಿಷಯು ಕುರಿತು ದತ್ತಿ ಉಪನ್ಯಾಸ ಏರ್ಪಡಿಸಲಾಗಿತ್ತು. ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ ಕನ್ನಡ ಉಪನ್ಯಾಸಕರಾದ ಎ.ಎಂ. ಮಹದೇವಸ್ವಾಮಿ ಉಪನ್ಯಾಸ ನೀಡಿದರು. ವಚನ ಸಾಹಿತ್ಯ ಮಾನವೀಯ ಮೌಲ್ಯಗಳ ತಳಹದಿಯ ಮೇಲೆ ರಚನೆಗೊಂಡಿದ್ದು ಬಸವಾದಿ ಶರಣರ ಜೀವನ ಸರ್ವಕಾಲಕ್ಕೂ ಅನುಕರಣೀಯ ಎಂದು ತಿಳಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ಎ.ಜಿ. ಶಿವಕುಮಾರ್ ಅವರು ಮಾತನಾಡಿ ಪರಮಪೂಜ್ಯ ಶ್ರೀಗಳವರು ಅತ್ಯಂತ ಕಿರಿಯ ವಯಸ್ಸಿನಲ್ಲಿಯೇ ಶ್ರೀಮಠದ ಪಟ್ಟಾಧಿಕಾರವನ್ನು ವಹಿಸಿಕೊಂಡು ಯಶಸ್ವಿಯಾಗಿ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಿಸಿಕೊಂಡರು. ಶ್ರೀಗಳು ವಿದ್ಯಾಪಕ್ಷಪಾತಿಗಳಾಗಿದ್ದರು. ಶಿಕ್ಷಣ ಕ್ಷೇತ್ರದಲ್ಲಿ ಅವರಿಗಿದ್ದ ದೂರದೃಷ್ಟಿ ವಿದ್ಯಾರ್ಥಿಗಳು ಮತ್ತು ಬಡವರ ಬಗ್ಗೆ ಅವರಿಗಿದ್ದ ಪ್ರೀತಿ ಮತ್ತು ಕಾಳಜಿ ಅಪಾರ ಎಂದರು.

ಸಮಾರಂಭದಲ್ಲಿ ಚಾಮರಾಜನಗರದ ಶರಣ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಆರ್. ಕುಮಾರಸ್ವಾಮಿ, ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಾರ್ವಜನಿಕ ಸಂಪರ್ಕಾಧಿಕಾರಿಗಳಾದ ಶ್ರೀ ಆರ್.ಎಂ. ಸ್ವಾಮಿ, ಶರಣ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ಶ್ರೀ ಬಿ.ಕೆ. ರವಿಕುಮಾರ್, ರೋಟರಿ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಆರ್. ಪ್ರಕಾಶ್, ಚಾಮರಾಜನಗರದ ಕದಳಿ ವೇದಿಕೆಯ ಅಧ್ಯಕ್ಷರಾದ ಶ್ರೀಮತಿ ವಸಂತಮ್ಮ ಇವರುಗಳು ಉಪಸ್ಥಿತರಿದ್ದರು.

ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಪ್ರಶಸ್ತಿ ಪತ್ರ ಮತ್ತು ಬಹುಮಾನ ವಿತರಣೆ ಮಾಡಲಾಯಿತು.

ಕು. ಕಾಂಚನಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀ ಬಿ.ಕೆ. ರವಿಕುಮಾರ್ ಸ್ವಾಗತಿಸಿದರು. ಶ್ರೀ ಕೆ.ಎಂ. ಯೋಗೀಶ್ ವಂದಿಸಿದರು. ಶ್ರೀ ಮಹದೇವ ಪ್ರಭು ನಿರೂಪಿಸಿದರು.

ಅಷ್ಟದಳಕಮಲದ ಆತ್ಮದೊಳಗೆ ಸೃಷ್ಟಿ ಜನಿಸಿ
ಕೂರುಮ ದಿಗುದಂತಿ ದಿಗುವಳಯವ ನುಂಗಿ
ನಿಜಶೂನ್ಯ ತಾನಾದ ಬಳಿಕ
ತನ್ನ ತಾನರಿದ ನಿಜಪದ ಭಿನ್ನಯೋಗಕ್ಕೆ ಬಹುದೆ
ಕಂಗಳ ನೋಟದಲ್ಲಿ ಮನದ ಸೊಗಸಿನಲ್ಲಿ
ಅನಂಗನ ದಾಳಿಯನಗಲಿದೆನಣ್ಣಾ
ಮರೀಚಿಕಾಜಲದೊಳಡಗಿದ ಪ್ರಾಣಿ ವ್ಯಾಧನ
ಬಲೆಯೊಳಗಹುದೆ
ಎನ್ನ ದೇವ ಚನ್ನಮಲ್ಲಿಕಾರ್ಜುನನಲ್ಲದೆ
ಪರಪುರುಷರು ನಮಗಾಗದಣ್ಣಾ

– ಅಕ್ಕಮಹಾದೇವಿ

## ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಸ್ವಾತಂತ್ರ್ಯ ದಿನಾಚರಣೆ

### ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ನಂಜನಗೂಡು



ದಿನಾಂಕ. 15.08.2020ರಂದು ಪದವಿ ಮತ್ತು ಪದವಿಪೂರ್ವ ಕಾಲೇಜಿನ ಸಹಯೋಗದೊಂದಿಗೆ 74ನೇ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಪದವಿ ಕಾಲೇಜಿನ ಪ್ರಾಂಶುಪಾಲರು ಧ್ವಜಾರೋಹಣ ಮಾಡಿದರು. ದೇವೀರಮ್ಮನಹಳ್ಳಿಯ ಅನುರಾಗ ಮಕ್ಕಳ ಮನೆಯ ಸ್ಥಾಪಕರಾದ ಶ್ರೀ ಸೋಮಶೇಖರಮೂರ್ತಿರವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಶಿಕ್ಷಣ, ಆರೋಗ್ಯ ಮತ್ತು ಆರ್ಥಿಕ ಬೆಳವಣಿಗೆಯಲ್ಲಿ ಎದುರಾಗುವ ಸಮಸ್ಯೆಗಳನ್ನು ಬಗೆಹರಿಸಲು ಮಾನಸಿಕ ಸ್ಥೈರ್ಯವನ್ನು ಬೆಳೆಸಿಕೊಳ್ಳಬೇಕು. ಸ್ವಾತಂತ್ರ್ಯಕ್ಕಾಗಿ ಹೋರಾಡಿದವರ ತ್ಯಾಗ, ಬಲಿದಾನದ ಫಲವೇ ಸ್ವಾತಂತ್ರ್ಯ. ಈ ಸ್ವಾತಂತ್ರ್ಯಕ್ಕೆ ಅರ್ಥ ಬರಬೇಕಾದರೆ ನಮ್ಮ ಬದುಕಿನಲ್ಲಿ ಆದರ್ಶವನ್ನು, ನೈತಿಕತೆಯನ್ನು ಬೆಳೆಸಿಕೊಳ್ಳಬೇಕು ಎಂದರು.

ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ.ಪಿ. ವಿಜಯೇಂದ್ರ ಕುಮಾರ್‌ರವರು ಮಾತನಾಡಿ '90 ವರ್ಷಗಳ ತೀವ್ರ ಹೋರಾಟದ ಫಲವೇ ಇಂದಿನ ಈ ಆಚರಣೆ. ಈ ಸಂದರ್ಭದಲ್ಲಿ ತ್ಯಾಗ ಬಲಿದಾನ ಮಾಡಿದವರನ್ನು ಮತ್ತು ಸ್ವಾತಂತ್ರ್ಯಕ್ಕಾಗಿ ಹೋರಾಟದ ನಾಯಕತ್ವ ವಹಿಸಿದ್ದವರನ್ನು ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯ' ಎಂದು ಅಭಿಪ್ರಾಯಪಟ್ಟರು.

ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸಿ.ವಿ. ಬಸವರಾಜುರವರು ಮಾತನಾಡುತ್ತಾ 'ಇಂದಿನ ಜನಾಂಗ ಸ್ವಾತಂತ್ರ್ಯವನ್ನು ಸ್ವೇಚ್ಛೆ ಎಂದು ಭಾವಿಸಿದೆ. ಸ್ವಾತಂತ್ರ್ಯ ದಿನದ ಅರಿವೇ ಇಲ್ಲದಂತಾಗಿದೆ. ದೇಶದ ಪ್ರಜ್ಞಾವಂತರು ಇಂದಿನ ಯುವ ಜನತೆಯನ್ನು ದೇಶ ಪ್ರೇಮಿಗಳನ್ನಾಗಿ, ಸಮಾಜ ಸುಧಾರಕರನ್ನಾಗಿ ಪರಿವರ್ತಿಸುವತ್ತ ಶ್ರಮಿಸಬೇಕು' ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಹೆಚ್.ಎಸ್. ನಾಗೇಂದ್ರ ಕುಮಾರ್‌ರವರು ಮಾತನಾಡಿ 'ಗಳಿಸುವುದು ಮುಖ್ಯವಲ್ಲ, ಉಳಿಸುವುದು ಮುಖ್ಯ. ಸ್ವಾತಂತ್ರ್ಯ ಪೂರ್ವದ ಸಂಗತಿಗಳನ್ನು ನೆನೆಸಿಕೊಂಡು ಅವರು ನೀಡಿದ ಧ್ಯೇಯ ಉದ್ದೇಶವನ್ನು ಜೀವನದಲ್ಲಿ ಅಳವಡಿಸಿಕೊಂಡು ಸ್ವಾತಂತ್ರ್ಯವನ್ನು ಉಳಿಸಿ ಬೆಳೆಸಿಕೊಳ್ಳುವ ಜವಾಬ್ದಾರಿ ಎಲ್ಲರದು' ಎಂದರು.

ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಸ್.ಎನ್. ನಿರ್ಮಲಾದೇವಿಯವರು ಸ್ವಾಗತಿಸಿದರು. ಶ್ರೀ ಸಿದ್ಧಮಲ್ಲಿಕಾರ್ಜುನಸ್ವಾಮಿಯವರು ವಂದಿಸಿದರು. ಡಾ. ಸಿ.ಎಸ್. ಹೊನ್ನೇಗೌಡರವರು ಕಾರ್ಯಕ್ರಮವನ್ನು ನಿರೂಪಿಸಿದರು. ಕಾಲೇಜಿನ ಎಲ್ಲಾ ಅಧ್ಯಾಪಕ, ಅಧ್ಯಾಪಕೇತರರು ಮತ್ತು ಕೆಲವು ವಿದ್ಯಾರ್ಥಿಗಳು ಸಮಾರಂಭದಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಗಳು ದೇಶ ಭಕ್ತಿಗೀತೆಗಳನ್ನು ಹಾಡಿದರು.

## ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು



ಭಾರತದ ಅಸ್ತಿತ್ವವಿರುವುದೇ ಅದರ ಬಹುಮುಖಿ ಸಂಸ್ಕೃತಿಯಲ್ಲಿ. ಪರಂಪರೆಯಿಂದ ರೂಢಿಸಿಕೊಂಡು ಬಂದಿರುವ ಸಂಸ್ಕೃತಿ ಹಾಗೂ ಮೌಲ್ಯಗಳ ಮೊತ್ತ ಹಿಂದೂಧರ್ಮ. ಹಿಂದ್ ಎಂದರೆ ಧರ್ಮವಲ್ಲ. ಇಂಡಿಯಾ ಎಂದು ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ. ಎಂ. ಉಮಾಪತಿ ಅವರು ಹೇಳಿದರು.

ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ಹಾಗೂ ಪದವಿ ಪೂರ್ವ ಕಾಲೇಜು ವತಿಯಿಂದ ದಿನಾಂಕ 15.8.2020 ರಂದು ನಡೆದ 74ನೇ ಸ್ವಾತಂತ್ರ್ಯ ದಿನಾಚರಣೆಯ ಮುಖ್ಯ ಭಾಷಣಕಾರರಾಗಿ ಆಗಮಿಸಿ ಅವರು ಮಾತನಾಡಿದರು. ಸ್ವಾತಂತ್ರ್ಯದ ದಿನವೆಂದರೆ ಭಾರತ ಗುಲಾಮತನದಿಂದ, ಪರಕೀಯರ ಶೋಷಣೆಯಿಂದ ಮುಕ್ತಿಯನ್ನು ಪಡೆದ ದಿನ. ಸ್ವಾತಂತ್ರ್ಯವೆಂದರೆ ಅದು ದೇಶಕ್ಕೆ ಮಾತ್ರ ದೊರೆತದ್ದಲ್ಲ; ಪ್ರತಿಯೊಬ್ಬ ವ್ಯಕ್ತಿಗೂ ದೊರೆತ ಸ್ವಾತಂತ್ರ್ಯ. ಸಾಂಸ್ಕೃತಿಕ ವೈವಿಧ್ಯತೆಯನ್ನು ಒಳಗೊಂಡ ಭಾರತ ದೇಶವು ದ್ವೇಷದ ಬಿತ್ತನೆಯಿಂದ ಪ್ರಗತಿಯನ್ನು ಕಾಣಲು ಸಾಧ್ಯವಿಲ್ಲ. ಭಾರತೀಯರಾದ ನಮ್ಮಲ್ಲಿ "ವಸುಧೈವ ಕುಟುಂಬಕಂ" ಎಂಬ ಭಾವನೆ ಬಲಗೊಳ್ಳಬೇಕು ಎಂದರು.

ಎನ್.ಸಿ.ಸಿ. ಅಧಿಕಾರಿಗಳಾದ ಲೆ. ಡಾ. ಎಲ್. ವಿನಯ್ ಕುಮಾರ್‌ರವರು ಸ್ವಾಗತಿಸಿದರು ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಸ್. ಸೋಮಶೇಖರ ಅವರು ವಂದಿಸಿದರು. ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಹೆಚ್.ಸಿ. ಹೊನ್ನಪ್ಪ ಅವರು ಉಪಸ್ಥಿತರಿದ್ದರು, ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಎನ್. ಮಹೇಶ್ವರಿ ಕಾರ್ಯಕ್ರಮವನ್ನು ನಿರೂಪಿಸಿದರು.

## ಜೆಎಸ್‌ಎಸ್ ಪ್ರೌಢಶಾಲೆ, ಸರಸ್ವತಿಪುರಂ

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ದಿನಾಂಕ 15.8.2020ರಂದು 74ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಸರಸ್ವತಿಪುರಂನ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಹಿರಿಯ ಆಡಳಿತ ವೈದ್ಯಾಧಿಕಾರಿಗಳಾದ ಡಾ. ಬಿ.ವೈ. ಶ್ರೀನಿವಾಸ್‌ರವರು ಮಾತನಾಡುತ್ತಾ "ನಾವು ಸ್ವತಂತ್ರವಾಗಿರುವುದು ಮುಖ್ಯವಲ್ಲ. ನಾವು ದೇಶದ ಪ್ರಜೆಯಾಗಿ ನಮಗೆಷ್ಟು ಜವಾಬ್ದಾರಿ ಇದೆ ಎನ್ನುವುದು ಮುಖ್ಯ. ಉತ್ತಮ ಪ್ರಾಮಾಣಿಕ ಅಧಿಕಾರಿಗಳಾಗಿ ನಮ್ಮನ್ನು ನಾವು ಸಮಾಜಸೇವೆಗೆ ತೊಡಗಿಸಿಕೊಳ್ಳಬೇಕು" ಎಂದು ಹೇಳಿ ಸ್ವಾತಂತ್ರ್ಯ ಹೋರಾಟಗಾರರ ಬಲಿದಾನವನ್ನು ನೆನಪಿಸಿದರು.

ಇದೇ ಸಂದರ್ಭದಲ್ಲಿ ಮತ್ತೋರ್ವ ಕೊರೋನ ವಾರಿಯರ್ಸ್ ಆದ ಸರಸ್ವತಿಪುರಂನ ನಗರ ಪ್ರಾಥಮಿಕ ಆರೋಗ್ಯ ಕೇಂದ್ರದ ಕಿರಿಯ ಮಹಿಳಾ ಆರೋಗ್ಯ

ಸಹಾಯಕಿ ಕುಮಾರಿ ಅನುಸೂಯರವರು ಉಪಸ್ಥಿತರಿದ್ದರು.

ಅಧ್ಯಕ್ಷತೆ ವಹಿಸಿದ್ದ ಶಾಲೆಯ ಪ್ರಭಾರ ಮುಖ್ಯೋಪಾಧ್ಯಾಯಿನಿಯವರಾದ ಶ್ರೀಮತಿ ಡಿ.ಆರ್. ಮಂಜುಳರವರು ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಮಡಿದ ಮಹನೀಯರನ್ನು ಸ್ಮರಿಸಿ ಅವರ ಆದರ್ಶಗಳನ್ನು ಮೈಗೂಡಿಸಿಕೊಂಡು ದೇಶವನ್ನು ಪ್ರಗತಿಯ ಹಾದಿಯಲ್ಲಿ ಮುನ್ನಡೆಸಬೇಕು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ದೇಶಕ್ಕಾಗಿ ತಮ್ಮ ಪ್ರಾಣವನ್ನೇ ನೀಡಿದ ಮಹನೀಯರನ್ನು ಸ್ಮರಿಸಿ ದೇಶಪ್ರೇಮ ಬೆಳೆಸಿಕೊಳ್ಳಬೇಕು ಎಂದು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಸಮುಚ್ಚಯದ ಮುಖ್ಯಸ್ಥರುಗಳಾದ ಶ್ರೀ ವೈ.ಎನ್. ಬಸವರಾಜು, ಶ್ರೀಮತಿ ಪ್ರೇಮಲತಾ, ಶ್ರೀಮತಿ ಮಮತಾ ಸುರೇಶ್, ಶ್ರೀ ಶಿವಬಸಪ್ಪ ಮತ್ತು ಶ್ರೀ ಮಹದೇವಪ್ಪ ಉಪಸ್ಥಿತರಿದ್ದರು. ಶ್ರೀಮತಿ ಎನ್. ಲಕ್ಷ್ಮೀ ಪ್ರಾರ್ಥಿಸಿದರು. ಶ್ರೀ ಸಿ.ಬಿ. ಉಮೇಶ್ ಸ್ವಾಗತಿಸಿದರು. ಶ್ರೀಮತಿ ಜೆ. ಶಶಿಕಲಾ ವಂದಿಸಿದರು. ಶ್ರೀ ಆರ್. ಸೂರ್ಯಕುಮಾರ್ ಕಾರ್ಯಕ್ರಮವನ್ನು ನಿರೂಪಿಸಿದರು.

### ಜೆಎಸ್‌ಎಸ್ ಪಬ್ಲಿಕ್ ಶಾಲೆ, ಜೆಪಿ ನಗರ



ಮೈಸೂರಿನ ಜೆಪಿ ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ದಿನಾಂಕ 15.8.2020ರಂದು 74ನೇ ಸ್ವಾತಂತ್ರ್ಯೋತ್ಸವವನ್ನು ಆಚರಿಸಲಾಯಿತು. ಅಂತರ್ಜಾಲ ವಿಡಿಯೋ ಮೂಲಕ ಶಾಲಾ ವಿದ್ಯಾರ್ಥಿಗಳು ಸಹ ಕಾರ್ಯಕ್ರಮವನ್ನು ವೀಕ್ಷಿಸಿದರು.

ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಕೆ. ಸ್ಮಿತಾ ಕುರೂಪ್ ಅವರು ಧ್ವಜಾರೋಹಣ ನೆರವೇರಿಸಿ ಸ್ವಾತಂತ್ರ್ಯದ ಅವಶ್ಯಕತೆ ಹಾಗೂ ಅದನ್ನು ಉಳಿಸಿ ಅನುಭವಿಸುವ ಬಗ್ಗೆ ತಿಳಿಸಿದರು. ಶಾಲಾ ಶಿಕ್ಷಕ ವೃಂದದವರು ಧ್ವಜಗೀತೆ ಮತ್ತು ರಾಷ್ಟ್ರಗೀತೆಯನ್ನು ಹಾಡಿದರು. ಇಂಗ್ಲಿಷ್ ಶಿಕ್ಷಕಿ ಶ್ರೀಮತಿ ಬಿ.ಕೆ. ತನುಜಾರವರು ಸ್ವಾಗತಿಸಿದರು.

ಶಾಲಾ ಶಿಕ್ಷಕ ವೃಂದದವರು ದೇಶ ಭಕ್ತಿಗೀತೆಯನ್ನು ಹಾಡಿದರು. ಶಾಲೆಯ ಉಪ–ಪ್ರಾಂಶುಪಾಲರಾದ ಶ್ರೀಮತಿ ಕೆ.ಎ. ಸುನಿತಾರವರು ವಂದಿಸಿದರು.

### ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು, ಮಾಲೂರು ಕೋಲಾರ ಜಿಲ್ಲೆ



ಕೋಲಾರ ಜಿಲ್ಲೆಯ ಮಾಲೂರಿನಲ್ಲಿರುವ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ 15.8.2020ರಂದು 74ನೆಯ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗೌರವಾನ್ವಿತ ಪ್ರಧಾನ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳಾದ ಶ್ರೀಮತಿ ಪಾರ್ವತಮ್ಮನವರು ಇವರು ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ ಬ್ರಿಟಿಷ್ ಸಾಮ್ರಾಜ್ಯದಿಂದ ನಮ್ಮ ದೇಶಕ್ಕೆ ಸ್ವಾತಂತ್ರ್ಯವನ್ನು ಪಡೆಯಲು ಮಹಾತ್ಮಗಾಂಧೀಜಿ, ನೇತಾಜಿ ಸುಭಾಷ್ ಚಂದ್ರಬೋಸ್, ಬಾಲಗಂಗಾಧರ ತಿಲಕ್, ಭಗತ್ ಸಿಂಗ್ ಮುಂತಾದ ಅನೇಕ ಸ್ವಾತಂತ್ರ್ಯ ಹೋರಾಟಗಾರರು ಬ್ರಿಟಿಷರ ವಿರುದ್ಧ ಹೋರಾಡಿದ್ದಾರೆ. ಅವರು ನೀಡುತ್ತಿದ್ದ ಹಿಂಸಾತ್ಮಕ ನೋವುಗಳನ್ನು ತಾಳ್ಮೆಯಿಂದ ಸಹಿಸಿಕೊಂಡು ಅಹಿಂಸಾತ್ಮಕ ಹೋರಾಟ ಮಾಡಿ, ದೇಶಕ್ಕೋಸ್ಕರ ತಮ್ಮ ಪ್ರಾಣವನ್ನು ಅರ್ಪಿಸಿದರು. ಇವರ ಪರಿಶ್ರಮ, ತ್ಯಾಗ ಮತ್ತು ಬಲಿದಾನಗಳ ಫಲವಾಗಿ ದೇಶಕ್ಕೆ ಸ್ವಾತಂತ್ರ್ಯ ಲಭಿಸಿತು. ದೇಶಪ್ರೇಮ, ದೇಶಾಭಿಮಾನವನ್ನು ಮಕ್ಕಳಲ್ಲಿ ಬೆಳೆಸಬೇಕು. ಸಂವಿಧಾನ ಮತ್ತು ಕಾನೂನಿನ ಅರಿವು ಮೂಡಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಶಿಕ್ಷಣ ಸಂಸ್ಥೆಗಳ ಸಂಯೋಜನಾಧಿಕಾರಿಗಳಾದ ಶ್ರೀ ಎಸ್.ಹೆಚ್. ಮಹೇಶ್ವರಪ್ಪನವರು ಮಾತನಾಡುತ್ತಾ ನೂರಾರು ವರ್ಷಗಳ ಹೋರಾಟ, ತ್ಯಾಗ ಮತ್ತು ಬಲಿದಾನದ ಫಲವಾಗಿ ಸ್ವಾತಂತ್ರ್ಯ ದೊರಕಿತು. ಸ್ವಾತಂತ್ರ್ಯ ಲಭಿಸಿ 74 ವರ್ಷಗಳಾದರೂ ಇನ್ನೂ ಮೂಲಭೂತ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೆ. ಇದಕ್ಕೆ ಕಾರಣ ಜನಸಂಖ್ಯಾಸ್ಫೋಟ. ಆದ್ದರಿಂದ ಜನಸಂಖ್ಯಾ ನಿಯಂತ್ರಣಕ್ಕೆ ಕಡಿವಾಣ ಹಾಕಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಮುಚ್ಚಯದ ನಾಲ್ಕು ವಿಭಾಗಗಳ ಮುಖ್ಯಸ್ಥರು, ಬೋಧಕ ಮತ್ತು ಬೋಧಕೇತರ ವರ್ಗದವರು, ಆರಕ್ಷಕ ಸಿಬ್ಬಂದಿಗಳು ಹಾಗೂ ಆನ್‌ಲೈನ್ ಮುಖಾಂತರ ನೂರಾರು ವಿದ್ಯಾರ್ಥಿಗಳು ಮತ್ತು ಪೋಷಕರು ಪಾಲ್ಗೊಂಡರು.

ಪಬ್ಲಿಕ್ ಶಾಲೆಯ ಸಹಶಿಕ್ಷಕರಾದ ಶ್ರೀ ಆನಂದ್ ಮತ್ತು ತಂಡದವರು ಪ್ರಾರ್ಥಿಸಿದರು. ಸಹಶಿಕ್ಷಕರಾದ ಶ್ರೀ ಎಲ್. ಮುನಿಕೃಷ್ಣಪ್ಪ ಸ್ವಾಗತಿಸಿದರು. ಕಾಲೇಜು ವಿಭಾಗದ ಕನ್ನಡ ಉಪನ್ಯಾಸಕರಾದ ಶ್ರೀ ಬಿ.ಎನ್. ಚಂದ್ರಶೇಖರ್ ಕಾರ್ಯಕ್ರಮ ನಿರೂಪಿಸಿದರು. ಜೆಎಸ್‌ಎಸ್ ಗಾಯತ್ರಿ ಪ್ರೌಢಶಾಲೆಯ ಸಹಶಿಕ್ಷಕಿ ಶ್ರೀಮತಿ ಮೈನಾ ವಂದಿಸಿದರು.

□

**ಜೆಎಸ್‌ಎಸ್ ಸಂಸ್ಥೆಗಳಲ್ಲಿ ನಡೆಯುವ ಕಾರ್ಯಕ್ರಮದ ವರದಿಗಳು ಮತ್ತು ಛಾಯಾಚಿತ್ರಗಳನ್ನು ಜೆಎಸ್‌ಎಸ್ ಮಾಸಪತ್ರಿಕೆಯ ಈ ಇಮೇಲ್ ವಿಳಾಸಕ್ಕೆ ಕಳುಹಿಸುವುದು**

**email:jssmasapatrike@gmail.com**

ಹಾಲ ಹಿಡಿದು ಬೆಣ್ಣೆಯನರಸಲುಂಟೆ
ಲಿಂಗವ ಹಿಡಿದು ಪುಣ್ಯತೀರ್ಥಕ್ಕೆ ಹೋಗಲುಂಟೆ
ಲಿಂಗದ ಪಾದತೀರ್ಥ ಪ್ರಸಾದವ ಕೊಂಡು
ಅನ್ಯಬೋಧೆ ಅನ್ಯಶಾಸ್ತ್ರಕ್ಕೆ ಹಾರೈಸಲೇತಕ್ಕೆ
ಇಷ್ಟಲಿಂಗವಿದ್ದಂತೆ ಸ್ಥಾವರಲಿಂಗಕ್ಕೆ ಶರಣೆಂದೆನಾದಡೆ
ತಡೆಯದೆ ಹುಟ್ಟಿಸುವನು ಶ್ವಾನನ ಗರ್ಭದಲ್ಲಿ
ಅದೆಂತೆಂದಡೆ; ಶಿವಧರ್ಮಪುರಾಣದಲ್ಲಿ–
"ಇಷ್ಟಲಿಂಗಮವಿಶ್ವಸ್ಯ ತೀರ್ಥಲಿಂಗಸ್ಯ ಪೂಜಕಃ
ಶ್ವಾನಯೋನಿಶತಂ ಗತ್ವಾ ಚಾಂಡಾಲಗೃಹಮಾಚರೇತ್" ಎಂದುದಾಗಿ
ಇದನರಿದು ಗುರು ಕೊಟ್ಟ ಲಿಂಗದಲ್ಲಿಯೇ ಎಲ್ಲಾ ತೀರ್ಥಂಗಳೂ
ಎಲ್ಲ ಕ್ಷೇತ್ರಂಗಳೂ ಇದ್ದಾವೆಂದು ಭಾವಿಸಿ ಮುಕ್ತರಪ್ಪುದಯ್ಯಾ
ಇಂತಲ್ಲದೆ ಗುರು ಕೊಟ್ಟ ಲಿಂಗವ ಕಿಱಿದು ಮಾಡಿ
ತೀರ್ಥಲಿಂಗವ ಹಿರಿದು ಮಾಡಿ ಹೋಹಾತಂಗೆ
ಅಘೋರನರಕ ತಪ್ಪದು ಕಾಣಾ, ಚನ್ನಮಲ್ಲಿಕಾರ್ಜುನಾ

– ಅಕ್ಕಮಹಾದೇವಿ

## ಪಠ್ಯದಲ್ಲಿ ದೇಶಭಕ್ತಿಯ ಸಂಗತಿಗಳನ್ನು ಅಳವಡಿಸುವುದು ಅಗತ್ಯ



ಪ್ರಾಥಮಿಕ ಹಂತದಿಂದ ಸ್ನಾತಕೋತ್ತರದವರೆಗೂ ದೇಶಭಕ್ತಿಯುಂಟು ಮಾಡುವ ಪಠ್ಯವನ್ನು ಅಳವಡಿಸುವುದು ಅಗತ್ಯ ಎಂದು ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಮೈಸೂರು ಜಿಲ್ಲಾ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷರು ಆದ ಡಾ. ಎಂ.ಜಿ. ಕೃಷ್ಣಮೂರ್ತಿಯವರು ತಿಳಿಸಿದರು. ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ದಿನಾಂಕ 15.8.2020ರಂದು ನಡೆದ 74ನೇ ಸ್ವಾತಂತ್ರ್ಯ ದಿನಾಚರಣೆಯ ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ ಅವರು ತಿಳಿಸಿದರು.

60-70 ವರ್ಷಗಳ ನಿರಂತರ ಹೋರಾಟದಿಂದ ನಮಗೆ ಸ್ವಾತಂತ್ರ್ಯ ಲಭ್ಯವಾಗಿದೆ. ನಾಯಕರು ಹಾಗೂ ಜನತೆಯ ತ್ಯಾಗ-ಬಲಿದಾನದಿಂದ ದೊರೆತಿದೆ. ಮಹಾತ್ಮ ಗಾಂಧೀಜಿಯವರು ಹೋರಾಟದ ನಾಯಕತ್ವ ವಹಿಸಿಕೊಂಡ ಮೇಲೆ ಸ್ವಾತಂತ್ರ್ಯ ಚಳವಳಿ ಹಂತ-ಹಂತವಾಗಿ ತೀವ್ರಗೊಂಡು ಮುನ್ನಡೆಯಿತು. ಬ್ರಿಟಿಷರ ಗುಂಡುಗಳಿಗೆ ಶಾಂತಿಯ ಎದೆಯೊಡ್ಡಿ ಸ್ವಾತಂತ್ರ್ಯ ದೊರಕಿಸಿಕೊಟ್ಟರು. ಅಖಂಡ ಭಾರತದ ಗಾಂಧೀಜಿಯವರ ಹಾಗೂ ದೇಶಭಕ್ತರ ಭಾವನೆಗಳಿಗೆ ಬ್ರಿಟಿಷರು ಅವಕಾಶ ಕಲ್ಪಿಸಲಿಲ್ಲ. ಕೊನೆಗೂ ಪಾಕಿಸ್ತಾನ-ಹಿಂದೂಸ್ತಾನಗಳ ಪ್ರತ್ಯೇಕತೆಯನ್ನು ಸಾಧಿಸಿದರು ಎಂದರು.

ಇಂದಿನ ಮಕ್ಕಳು, ಯುವಕರು, ವಿಶೇಷವಾಗಿ ರಾಜಕಾರಣಿಗಳು ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸವನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕಿದೆ. ಅದರ ಅರಿವೇ ಇಲ್ಲದವರಿಗೆ ದೇಶವನ್ನು ಸದೃಢವಾಗಿ ಮುನ್ನಡೆಸಲು ಸಾಧ್ಯವಾಗುವುದಿಲ್ಲ. ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ದೇಶ ಸಂಪೂರ್ಣವಾಗಿ ಅಭಿವೃದ್ಧಿ ಹೊಂದಬೇಕಾಗಿದೆ. ಸುತ್ತೂರು ಶ್ರೀಮಠದಲ್ಲಿ ಧ್ವಜಾರೋಹಣಕ್ಕೆ ಪೂಜ್ಯರು ಅವಕಾಶ ಕಲ್ಪಿಸಿಕೊಟ್ಟಿರುವುದು ನನ್ನ ಸೌಭಾಗ್ಯ ಎಂದು ಸಂತೋಷ ವ್ಯಕ್ತಪಡಿಸಿದರು.

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಕಾರ್ಯಕ್ರಮದ ದಿವ್ಯ ಸಾನ್ನಿಧ್ಯ ವಹಿಸಿದ್ದರು. ಜೆಎಸ್‌ಎಸ್ ಆಸ್ಪತ್ರೆಯ ನರರೋಗ ತಜ್ಞರಾದ ಕರ್ನಲ್, ಡಾ. ಟಿ.ಎಸ್. ವಾಸನ್, ಆಯುರ್ವೇದ ತಜ್ಞವೈದ್ಯರಾದ ಡಾ. ಬಿ. ಗುರುಬಸವರಾಜು, ಶ್ರೀಮಠದ ಸದ್ಭಕ್ತರು, ಕಾರ್ಯಕರ್ತರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕೋವಿಡ್ ಹಿನ್ನೆಲೆಯಲ್ಲಿ ನಿಯಮಗಳನ್ನು ಅನುಸರಿಸಿ ಕಾರ್ಯಕ್ರಮವನ್ನು ಸರಳ ರೀತಿಯಲ್ಲಿ ಆಚರಿಸಲಾಯಿತು.

ಉಸುರಿನ ಪರಿಮಳವಿರಲು ಕುಸುಮದ ಹಂಗೇಕಯ್ಯಾ
ಕ್ಷಮೆ ದಮೆ ಶಾಂತಿ ಸೈರಣೆಯಿರಲು ಸಮಾಧಿಯ ಹಂಗೇಕಯ್ಯಾ
ಲೋಕವೆ ತಾನಾದ ಬಳಿಕ ಏಕಾಂತದ ಹಂಗೇಕಯ್ಯಾ
ಚನ್ನಮಲ್ಲಿಕಾರ್ಜುನಾ

– ಅಕ್ಕಮಹಾದೇವಿ

## ಸುವರ್ಣ ಸಂಭ್ರಮ

## ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ಊಟಿ ರಸ್ತೆ, ಮೈಸೂರು




ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ಅನುಪಮ ದೂರದರ್ಶಿತ್ವದ ಫಲವಾಗಿ 1964ರಲ್ಲಿ ಮೈಸೂರಿನ ರಾಮಾನುಜ ರಸ್ತೆಯಲ್ಲಿದ್ದ ಜೆಎಸ್‌ಎಸ್ ಪ್ರೌಢಶಾಲೆಯ ಪಕ್ಕದಲ್ಲಿ ಜೆಎಸ್‌ಎಸ್ ಕಾಲೇಜನ್ನು ಪ್ರಾರಂಭಿಸಿದರು.

1964ರಲ್ಲಿ ಪಿಯುಸಿ ವಿಜ್ಞಾನ ವಿಷಯದಲ್ಲಿ 52 ವಿದ್ಯಾರ್ಥಿಗಳು, ಎಂಟು ಅಧ್ಯಾಪಕರು, ಮೂವರು ಅಧ್ಯಾಪಕೇತರರುಗಳಿಂದ ಕಾಲೇಜು ಆರಂಭಗೊಂಡಿತು. 1965ರಲ್ಲಿ ಬಿ.ಎಸ್ಸಿ ಪದವಿ ತರಗತಿಯೊಡನೆ ಪದವಿ ಕಾಲೇಜೂ ಪ್ರಾರಂಭವಾಯಿತು. ಅನಂತರ ಪಿಯುಸಿಯಲ್ಲಿ ಕಲಾ, ವಾಣಿಜ್ಯ ತರಗತಿಗಳು, 1966ರಲ್ಲಿ ಬಿ.ಎ. ಮತ್ತು 1967ರಲ್ಲಿ ಬಿ.ಕಾಂ. ಪದವಿ ತರಗತಿಗಳು ಪ್ರಾರಂಭಗೊಂಡು ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು ರೂಪುಗೊಂಡಿತು.

ಮುಂದೆ 1979–80ರಲ್ಲಿ ಬಿಬಿಎಂ ಪದವಿ, ಪದವಿಯಲ್ಲಿ ಎಲೆಕ್ಟ್ರಾನಿಕ್ಸ್, ಗಣಕ ವಿಜ್ಞಾನ, ರೇಷ್ಮೆಕೃಷಿ ಮೊದಲಾದ ವಿಷಯಗಳನ್ನು ಸೇರಿಸಲಾಯಿತು. ಇದಲ್ಲದೆ, 2008 ರಲ್ಲಿ ಬಿ.ಸಿ.ಎ ಪದವಿ ತರಗತಿಗಳು, 2001ರಲ್ಲಿ ಸ್ನಾತಕೋತ್ತರ ಪದವಿ ಕೋರ್ಸುಗಳನ್ನು, 2014–15ನೇ ಶೈಕ್ಷಣಿಕ ಸಾಲಿನಲ್ಲಿ ಯುಜಿಸಿ ಪ್ರಾಯೋಜಿತ ಕೌಶಲ್ಯಾಧಾರಿತ ಬಿ.ವೋಕ್ ಪದವಿ ಕೋರ್ಸುಗಳು ಅಡ್ವಾನ್ಸ್ಡ್ ಡಿಪ್ಲೊಮೊ ಕೋರ್ಸುಗಳನ್ನು ಆರಂಭಿಸಲಾಗಿದೆ. ಪ್ರಸ್ತುತ ಪದವಿ ವಿಭಾಗದಲ್ಲಿ 23 ಕಾಂಬಿನೇಷನ್ಸ್‌ನಲ್ಲಿ 7 ಕೋರ್ಸುಗಳು, ಸ್ನಾತಕೋತ್ತರ ಪದವಿಯಲ್ಲಿ 12 ಪ್ರೋಗ್ರಾಂಗಳು, 7 ವಿಷಯಗಳಲ್ಲಿ ಪಿಹೆಚ್.ಡಿ ಪ್ರೋಗ್ರಾಂಗಳು, 5 ಪಿಜಿ ಡಿಪ್ಲೊಮೊ, ಆ್ಯಡ್‌ಆನ್ ಕೋರ್ಸುಗಳು 11 ಸರ್ಟಿಫಿಕೇಟ್, 10 ಡಿಪ್ಲೊಮೊ, 6 ಆ್ಯಡ್‌ಆನ್ ಅಡ್ವಾನ್ಸ್, ಹೀಗೆ ಇತರೆ ಕೋರ್ಸುಗಳು ಸೇರಿ ಒಟ್ಟು 70ಕ್ಕೂ ಹೆಚ್ಚಿನ ಕೋರ್ಸುಗಳು ನಡೆಯುತ್ತಿವೆ.

ಪ್ರಸ್ತುತ ಪದವಿ ಮತ್ತು ಪದವಿ ಪೂರ್ವ ಕಾಲೇಜಿನಿಂದ 4000ಕ್ಕೂ ಹೆಚ್ಚು ವಿದ್ಯಾರ್ಥಿಗಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. 200ಕ್ಕೂ ಹೆಚ್ಚಿನ ಅಧ್ಯಾಪಕರು ಹಾಗೂ 60ಕ್ಕೂ ಹೆಚ್ಚಿನ ಅಧ್ಯಾಪಕೇತರರು ಸೇವೆ ಸಲ್ಲಿಸುತ್ತಿದ್ದಾರೆ.

### ಕಾಲೇಜಿನ ಮೈಲಿಗಲ್ಲುಗಳು

2001ರಲ್ಲಿ ಕಾಲೇಜು ನ್ಯಾಕ್ (ರಾಷ್ಟ್ರೀಯ ಮೌಲ್ಯಮಾಪನ ಹಾಗೂ ಮೌಲ್ಯಾಂಕನ ಸಮಿತಿ) ಸಮಿತಿಯಿಂದ ಚತುರ್ತಾರಾ ಮಾನ್ಯತೆ ಪಡೆಯಿತು. ಅನಂತರ 2008, 2013 ಮತ್ತು 2020ರಲ್ಲಿ ಮತ್ತೆ ಪುನರ್ ಮೌಲ್ಯಮಾಪನಕ್ಕೆ ಒಳಪಟ್ಟು 'ಎ' ದರ್ಜೆ ಮಾನ್ಯತೆ ಪಡೆದಿದೆ. 2005ರಲ್ಲಿ ಯುಜಿಸಿಯಿಂದ ಶೈಕ್ಷಣಿಕ ಸ್ವಾಯತ್ತತೆ ಪಡೆದಿದೆ. 2008ರಲ್ಲಿ ಯುಜಿಸಿ ಪ್ರಾಯೋಜಕತ್ವದ 'ಬುದ್ಧ ಅಧ್ಯಯನ ಕೇಂದ್ರ'ವನ್ನು ಆರಂಭಿಸಲಾಗಿದೆ. 2010ರಲ್ಲಿ ಯುಜಿಸಿಯು ಈ ಕಾಲೇಜನ್ನು ಅಂತಸ್ಸಮರ್ಥ ಉತ್ಕೃಷ್ಟತಾ ಕಾಲೇಜು ಎಂದು ಗುರುತಿಸಿದೆ. 2011ರಲ್ಲಿ ಕರ್ನಾಟಕ ಸರ್ಕಾರ ಪ್ರಾಯೋಜಿತ 'ಬಯೋಟೆಕ್ನಾಲಜಿ ಫಿನಿಷಿಂಗ್ ಸ್ಕೂಲ್' ಅನ್ನು ಆರಂಭಿಸಿ ಈಗ ಬೈಸೆಪ್ ಹೆಸರಿನಲ್ಲಿ ಮುಂದುವರೆದಿದೆ. 2012ರಲ್ಲಿ ಭಾರತ ಸರ್ಕಾರದ ಜೈವಿಕ ತಂತ್ರಜ್ಞಾನ ಇಲಾಖೆಯು ಈ ಕಾಲೇಜನ್ನು 'ಸ್ಟಾರ್ ಕಾಲೇಜ್ ಸ್ಕೀಂ'ನಲ್ಲಿ ಗುರುತಿಸಿದೆ. 2014–15ರಲ್ಲಿ ಬಿ.ವೋಕ್. ಪದವಿ ಹಾಗೂ ಕಮ್ಯೂನಿಟಿ ಕಾಲೇಜ್ ಸ್ಕೀಂನಡಿಯಲ್ಲಿ ಆ್ಯನಿಮೇಷನ್ ಕೋರ್ಸ್‌ನ್ನು ಆರಂಭಿಸಲಾಗಿದೆ. ಅಲ್ಲದೆ ಯುಜಿಸಿಯಿಂದ ದೀನ್ ದಯಾಳ್ ಕೌಶಲ್ಯ ಕೇಂದ್ರ ಆರಂಭಿಸಿದ್ದು ಎಂ.ವೋಕ್. ಸ್ನಾತಕೋತ್ತರ ಪದವಿಗಳನ್ನು ಪ್ರಾರಂಭಿಸಲಾಗಿದೆ.

### ಕಾಲೇಜಿನಲ್ಲಿನ ಮೂಲಭೂತ ಸೌಲಭ್ಯಗಳು

1993ರಲ್ಲಿ ಮಹಾವಿದ್ಯಾಪೀಠವು ಪ್ರಾರಂಭಿಸಿದ ಆಸ್ಪತ್ರೆಗೆ ರಾಮಾನುಜ ರಸ್ತೆಯಲ್ಲಿದ್ದ ಕಾಲೇಜು ಕಟ್ಟಡವನ್ನು ಬಿಟ್ಟುಕೊಟ್ಟು ಬೆಂಗಳೂರು–ನೀಲಗಿರಿ (ಬೆಂಗಳೂರು–ಊಟಿ) ರಸ್ತೆಯಲ್ಲಿನ ಸು 7.08 ಎಕರೆ ವಿಶಾಲ ಪ್ರದೇಶದಲ್ಲಿ ಹೊಸದಾಗಿ ನಿರ್ಮಿಸಲಾದ ಮೂರು ಅಂತಸ್ತುಗಳ ಸರ್ವ ಸೌಲಭ್ಯವುಳ್ಳ ಕಟ್ಟಡಕ್ಕೆ ಕಾಲೇಜನ್ನು ಸ್ಥಳಾಂತರಿಸಲಾಯಿತು. ಇತ್ತೀಚೆಗೆ ನಿರ್ಮಾಣಗೊಂಡಿರುವ ನಾಲ್ಕನೇ ಅಂತಸ್ತು ಒಳಗೊಂಡಂತೆ ಸು. 20000 ಚ.ಮೀ. ವ್ಯಾಪ್ತಿಯ ಕಾಲೇಜು ಕಟ್ಟಡದಲ್ಲಿ ಪ್ರಸ್ತುತ 59 ತರಗತಿ ಕೊಠಡಿಗಳು, ಆಡಿಯೋ ಮತ್ತು ವಿಡಿಯೋ ಕೊಠಡಿಗಳು, 35 ಪ್ರಯೋಗಾಲಯಗಳು, ವಿಶಾಲವಾದ ಗ್ರಂಥಾಲಯ, ಒಳ ಕ್ರೀಡಾಂಗಣ, ಉಪಹಾರ ಗೃಹ, ಮಹಿಳಾ ವಿದ್ಯಾರ್ಥಿನಿಲಯ ಹಾಗೂ 600 ಮಂದಿ ಕೂರಬಹುದಾದ ಸುಸಜ್ಜಿತ ಹವಾ ನಿಯಂತ್ರಿತ ಸುವರ್ಣ ಸಭಾಂಗಣ ಮೊದಲಾದವುಗಳಿವೆ. ಕಾಲೇಜು ಎಂ.ಐ.ಎಸ್. ಸೌಲಭ್ಯವನ್ನು ಹೊಂದಿದ್ದು 477 ಅಂತರ್‌ಜಾಲ ಸಂಪರ್ಕಗಳಿವೆ. ಅಲ್ಲದೆ ಕಾಲೇಜಿನಲ್ಲಿ ಎನ್‌ಸಿಸಿ, ಎನ್‌ಎಸ್‌ಎಸ್, ಉದ್ಯೋಗ ಮಾರ್ಗದರ್ಶನ ಮತ್ತು ಮಾಹಿತಿ ಕೇಂದ್ರ, ಬ್ರೌಜಿಂಗ್ ಸೆಂಟರ್, ಸ್ಕೌಟ್ಸ್ ಮತ್ತು ಗೈಡ್ಸ್, ಯುವ ರೆಡ್‌ಕ್ರಾಸ್, ರೆಡ್‌ರಿಬ್ಬನ್ ಕ್ಲಬ್, ಗುಂಪು ಅಪಘಾತ ವಿಮೆ, ವಿಶಾಲವಾದ ಹೊರ ಕ್ರೀಡಾಂಗಣ, ಸುಂದರವಾದ ಉದ್ಯಾನವನ ಮೊದಲಾದ ಸೌಲಭ್ಯಗಳಿವೆ.

### ಪುಸ್ತಕಗಳ ಆಗರ ಜ್ಞಾನ ಭಂಡಾರ

ಕಾಲೇಜು ಗ್ರಂಥಾಲಯದಲ್ಲಿ 44127 ಶೀರ್ಷಿಕೆಗಳ 72085ಕ್ಕೂ ಹೆಚ್ಚು ಪುಸ್ತಕಗಳಿವೆ. ಇದಲ್ಲದೆ, 418 ಆಡಿಯೋ/ವಿಡಿಯೋ ಸಲಕರಣೆಗಳು 2015 ಸ್ಪರ್ಧಾತ್ಮಕ ಪರೀಕ್ಷೆಯ ಪುಸ್ತಕಗಳು, ಬುಕ್ ಬ್ಯಾಂಕ್‌ನಲ್ಲಿ 1243 ಪುಸ್ತಕಗಳು ಆನ್ ಲೈನ್ ಜರ್ನಲ್ಸ್ 5000, ವಿಷಯವಾರು 138 ನಿಯತಕಾಲಿಕೆಗಳು ಹಾಗೂ 18 ದಿನಪತ್ರಿಕೆಗಳು ಗ್ರಂಥಾಲಯದಲ್ಲಿದ್ದು ಇದೊಂದು ಜ್ಞಾನ ಭಂಡಾರವೇ ಆಗಿದೆ. 1969ರಲ್ಲಿ ಭಾರತದ ಪ್ರಪ್ರಥಮ ರಾಷ್ಟ್ರಪತಿಗಳಾಗಿದ್ದ ಡಾ. ಬಾಬು ರಾಜೇಂದ್ರಪ್ರಸಾದ್‌ರವರು ಕಾಲೇಜಿನ ಗ್ರಂಥಾಲಯಕ್ಕೆ ಭೇಟಿ ನೀಡಿ ಮೆಚ್ಚುಗೆ ಸೂಚಿಸಿರುವುದು ಗಮನಾರ್ಹವಾದ ಸಂಗತಿ.

### ಕಾಲೇಜಿನ ಪ್ರಕಟಣೆಗಳು

ಕಾಲೇಜಿನಿಂದ ಅನೇಕ ಗ್ರಂಥಗಳನ್ನು ಪ್ರಕಟಿಸಲಾಗಿದೆ. 'ಐದು ಮತ್ತು ಹತ್ತು' (ಕಥಾ ಸಂಕಲನ), 'ಶಾಕುಂತಲಾವಲೋಕನ' (ವಿಮರ್ಶೆ), 'ಶಾಪ' (ಕವನ ಸಂಕಲನ), 'ನಿಸರ್ಗ–ಒಂದು ಸಮೀಕ್ಷೆ' (ವಿಮರ್ಶೆ), 'ಒರೆಗಲ್ಲು' (ಲೇಖನಗಳ ಸಂಕಲನ), Globalisation - dimension & impact ಹಾಗೂ ರಜತ ದೀಪ್ತಿ (ರಜತ ಮಹೋತ್ಸವ ಸ್ಮರಣಸಂಚಿಕೆ) ಇವುಗಳನ್ನು ಇಲ್ಲಿ

ಹೆಸರಿಸಬಹುದು. ಅಲ್ಲದೆ 'ಪ್ರತಿಭಾ' ಎಂಬ ವಾರ್ಷಿಕ ಸಂಚಿಕೆ ಪ್ರಕಟಗೊಳ್ಳುತ್ತಿದೆ. ಇದಲ್ಲದೆ ಕಾಲೇಜಿನ ಅಧ್ಯಾಪಕ ವೃಂದ ತಮ್ಮ ತಮ್ಮ ವಿಷಯಗಳಿಗೆ ಸಂಬಂಧಿಸಿದಂತೆ 350ಕ್ಕೂ ಹೆಚ್ಚಿನ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ಕೆಲವು ಪುಸ್ತಕಗಳು ವಿಶ್ವವಿದ್ಯಾನಿಲಯದ ಪಠ್ಯವಾಗಿದ್ದದ್ದು ಅಭಿಮಾನದ ಸಂಗತಿಯಾಗಿದೆ. ಒಂದೇ ಮಾತಿನಲ್ಲಿ ಹೇಳುವುದಾದರೆ ಕಾಲೇಜು ಸಾಹಿತಿಗಳ ಒಂದು ಪರಂಪರೆಯನ್ನೇ ಹೊಂದಿದೆ.

### ಕಾಲೇಜಿನಲ್ಲಿ ಕಲಿತ ಪ್ರಮುಖರು

ಈ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿದ ಲಕ್ಷಾಂತರ ವಿದ್ಯಾರ್ಥಿಗಳಲ್ಲಿ ಕೆಲವರು ಇಂದು ಸಮಾಜದ ವಿವಿಧ ಸ್ಥರಗಳಲ್ಲಿ, ದೇಶ ವಿದೇಶಗಳಲ್ಲಿ ಕೆಲಸ ಮಾಡಿದವರು ಹಾಗೂ ಮಾಡುತ್ತಿರುವವರು ಇದ್ದಾರೆ. ಮುಖ್ಯವಾಗಿ ಸುತ್ತೂರು ಶ್ರೀಮಠದ 24ನೆಯ ಪೀಠಾಧಿಪತಿಗಳು ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ಅಧ್ಯಕ್ಷರೂ ಆಗಿರುವ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರು ಈ ಕಾಲೇಜಿನ ವಿದ್ಯಾರ್ಥಿಯಾಗಿ ಹಾಗೂ ಸ್ವಲ್ಪಕಾಲ ಅಧ್ಯಾಪಕರಾಗಿಯೂ ಇಲ್ಲಿ ಸೇವೆ ಸಲ್ಲಿಸಿರುವುದು ಹೆಮ್ಮೆಯ ಸಂಗತಿಯಾಗಿದೆ. ಶ್ರೀ ಅಡಗೂರು ಹೆಚ್ ವಿಶ್ವನಾಥ್‌ರವರು, ಶ್ರೀ ಎಸ್.ಎ. ರಾಮದಾಸ್‌ರವರು ಹಾಗೂ ಶ್ರೀ ಹೆಚ್.ಎಸ್. ಮಹಾದೇವಪ್ರಸಾದ್‌ರವರು ಸಚಿವರಾಗಿ ಸಂಸದರಾಗಿ, ಶಾಸಕರಾಗಿ ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಂಡಿದ್ದಾರೆ. ಸಾಹಿತ್ಯ ಕ್ಷೇತ್ರದಲ್ಲಿ ಡಾ. ಎಂ.ಎಸ್. ವೇದಾ, ಸಂಗೀತ ಕ್ಷೇತ್ರದಲ್ಲಿ ಮೈಸೂರು ಡಾ. ಎಂ. ಮಂಜುನಾಥ್‌ರವರು ಹಾಗೂ ಜೈಹೋ ಹಾಡಿನ ಖ್ಯಾತಿಯ ಶ್ರೀ ವಿಜಯ ಪ್ರಕಾಶ್‌ರವರು ಹೆಸರು ಮಾಡಿದ್ದಾರೆ. ಇವರಲ್ಲದೆ, ಧಾರ್ಮಿಕ, ಸಾಹಿತ್ಯ, ಕ್ರೀಡೆ, ಆಡಳಿತ, ಶಿಕ್ಷಣ, ವೈದ್ಯಕೀಯ, ಇಂಜಿನಿಯರಿಂಗ್ ಮೊದಲಾದ ಕ್ಷೇತ್ರಗಳಲ್ಲಿ ಇನ್ನೂ ಹಲವಾರು ಮಹನೀಯರು ಸೇವೆ ಸಲ್ಲಿಸಿದ್ದಾರೆ ಮತ್ತು ಸಲ್ಲಿಸುತ್ತಿದ್ದಾರೆ.

### ಕಾಲೇಜಿಗೆ ಭೇಟಿ ನೀಡಿರುವ ಮಹನೀಯರು

ರಾಷ್ಟ್ರಪತಿಗಳಾಗಿದ್ದ ಡಾ. ಬಾಬುರಾಜೇಂದ್ರ ಪ್ರಸಾದ್, ಡಾ. ಶಂಕರದಯಾಳ್ ಶರ್ಮ, ಡಾ. ಎ.ಪಿ.ಜೆ. ಅಬ್ದುಲ್ ಕಲಾಂರವರು, ಪ್ರಧಾನ ಮಂತ್ರಿಗಳಾಗಿದ್ದ ಶ್ರೀ ರಾಜೀವ್ ಗಾಂಧಿ, ಶ್ರೀ ವಿ.ಪಿ. ಸಿಂಗ್‌ರವರು, ರಾಜ್ಯಪಾಲರಾಗಿದ್ದ ಶ್ರೀ ಖುರ್ಷಿದ್ ಆಲಂಖಾನ್, ಮುಖ್ಯಮಂತ್ರಿಗಳಾಗಿದ್ದ ಶ್ರೀ ವೀರೇಂದ್ರ ಪಾಟೀಲ್, ಶ್ರೀ ರಾಮಕೃಷ್ಣ ಹೆಗ್ಗಡೆ, ಶ್ರೀ ಎಸ್.ಆರ್. ಬೊಮ್ಮಾಯಿ, ಶ್ರೀ ಜೆ.ಎಚ್. ಪಾಟೀಲ್, ಶ್ರೀ ಎಂ. ವೀರಪ್ಪ ಮೊಯಿಲಿ, ಶ್ರೀ ಸಿದ್ದರಾಮಯ್ಯರವರು, ಹೆಸರಾಂತ ಸಾಹಿತಿಗಳಾದ ಶ್ರೀ ಶಿವರಾಮ ಕಾರಂತ (ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರು), ಡಾ. ಜಿ.ಎಸ್. ಶಿವರುದ್ರಪ್ಪ (ರಾಷ್ಟ್ರಕವಿಗಳು), ಡಾ. ಎಂ. ಚಿದಾನಂದಮೂರ್ತಿ, ನಾಡೋಜ ಪ್ರೊ. ದೇ.ಜ.ಗೌ., ನಾಡೋಜ ಶ್ರೀ ಚನ್ನವೀರ ಕಣವಿ ಮತ್ತು ಶ್ರೀ ಎ.ಎನ್. ಮೂರ್ತಿರಾವ್‌ರವರು, ಅರ್ಥಶಾಸ್ತ್ರಜ್ಞರಾದ ಡಾ. ಡಿ.ಎಂ. ನಂಜುಂಡಪ್ಪ, ಡಾ. ಮಾಂಟೆಕ್‌ಸಿಂಗ್ ಅಹ್ಲುವಾಲಿಯಾ, ಡಾ. ನರೇಂದ್ರ ಜಾದವ್, ವಿಜ್ಞಾನಿಗಳಾದ ಡಾ. ಯು.ಆರ್. ರಾವ್, ಪದ್ಮಭೂಷಣ ಡಾ. ಎಂ. ಮಹದೇವಪ್ಪ, ನೊಬೆಲ್ ಪ್ರಶಸ್ತಿ ಪುರಸ್ಕೃತ ವಿಜ್ಞಾನಿಗಳಾದ ಪ್ರೊ. ಡೇವಿಡ್ ಜೆ ಗ್ರಾಸ್, ಪ್ರೊ. ಜಾನ್ ಬರ್‌ಟ್ರಾಂಡ್ ಗಾರ್ಡನ್, ಇಂಗ್ಲೆಂಡಿನ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಗಣಿತಶಾಸ್ತ್ರ ಪ್ರಾಧ್ಯಾಪಕರಾದ ಡಾ. ಟಿ.ಜೆ. ಪೆಡ್ಲಿ, ಸೌತ್ ಕೋರಿಯಾ ಗಣಿತಶಾಸ್ತ್ರ ಪ್ರಾಧ್ಯಾಪಕರಾದ ಡಾ. ತಾಕಿಮು ಕಿಮ್, ಅಮೇರಿಕಾದ ರಾಷ್ಟ್ರೀಯ ಆರೋಗ್ಯ ಸಂಸ್ಥೆಯ ಮುಖ್ಯಸ್ಥರಾದ ಡಾ. ಎಸ್. ಚಂದ್ರಶೇಖರಪ್ಪ, ಇಸ್ರೇಲಿನಲ್ಲಿ ಸಂಶೋಧನೆ ಮಾಡುತ್ತಿರುವ ಡಾ. ಬಿ.ಎನ್. ನಿಶಾತ್ ಹೀಗೆ ಅನೇಕ ಗಣ್ಯಮಹನೀಯರು ಕಾಲೇಜಿಗೆ ಭೇಟಿ ನೀಡಿದ್ದಾರೆ.

### ರಜತ ಮಹೋತ್ಸವದ ಸವಿನೆನಪು

1990–91ರ ಶೈಕ್ಷಣಿಕ ವರ್ಷದಲ್ಲಿ ಕಾಲೇಜಿನ ರಜತ ಮಹೋತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲಾಗಿದೆ. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಜರುಗಿದ ಬೆಳ್ಳಿಹಬ್ಬ ಕಾರ್ಯಕ್ರಮಗಳಲ್ಲಿ ಮಾಜಿ ಪ್ರಧಾನಿಗಳಾಗಿದ್ದ ಶ್ರೀ ರಾಜೀವ್‌ಗಾಂಧಿ, ಶ್ರೀ ವಿ.ಪಿ. ಸಿಂಗ್, ಮುಖ್ಯಮಂತ್ರಿಗಳಾಗಿದ್ದ ಶ್ರೀ ರಾಮಕೃಷ್ಣ ಹೆಗ್ಗಡೆ, ಶ್ರೀ ಜೆ.ಎಚ್. ಪಟೇಲ್, ಶ್ರೀ ಎಸ್.ಆರ್. ಬೊಮ್ಮಾಯಿ, ಶ್ರೀ ವಿರೇಂದ್ರ ಪಾಟೀಲ್, ಸಾಹಿತಿಗಳಾದ ಶ್ರೀ ಶಿವರಾಮ

ಕಾರಂತ, ಪ್ರೊ. ದೇ.ಜ.ಗೌ, ಡಾ. ಜಿ.ಎಸ್. ಶಿವರುದ್ರಪ್ಪ ಮೊದಲಾದವರು ಪಾಲ್ಗೊಂಡಿದ್ದರು. ರಜತ ಮಹೋತ್ಸವದ ಸಂಸ್ಮರಣೆಗಾಗಿ "ರಜತ ದೀಪ್ತಿ" ಸ್ಮರಣ ಸಂಚಿಕೆಯನ್ನು ಪ್ರಕಟಿಸಲಾಗಿದೆ.

### ಸುವರ್ಣ ಮಹೋತ್ಸವ ಸಂಭ್ರಮ

ಕಾಲೇಜು ಸ್ಥಾಪನೆಯಾಗಿ 50 ಸಂವತ್ಸರಗಳು ತುಂಬಿರುವ ಸವಿನೆನಪಿಗಾಗಿ 2015-16ನೇ ಶೈಕ್ಷಣಿಕ ವರ್ಷದಲ್ಲಿ ಸುವರ್ಣ ಮಹೋತ್ಸವವನ್ನು ಹಲವಾರು ಅರ್ಥಪೂರ್ಣ ಕಾರ್ಯಕ್ರಮಗಳ ಮೂಲಕ, ವಿಶಿಷ್ಟವಾಗಿ ವಿಜೃಂಭಣೆಯಿಂದ ಆಚರಿಸಲಾಗಿದೆ. ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಕೃಪಾಶೀರ್ವಾದ ಹಾಗೂ ಮಹಾವಿದ್ಯಾಪೀಠದ ಸೂಕ್ತ ಮಾರ್ಗದರ್ಶನದಲ್ಲಿ ವರ್ಷವಿಡೀ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ ದೂರದರ್ಶಿತ್ವದ ಫಲವಾಗಿ 1964 ರಲ್ಲಿ ನಗರದ ರಾಮಾನುಜ ರಸ್ತೆಯಲ್ಲಿನ ಜೆಎಸ್‌ಎಸ್ ಪ್ರೌಢಶಾಲೆಯ ಕೊಠಡಿಯಲ್ಲಿ ಚಿಕ್ಕದಾಗಿ ಪ್ರಾರಂಭವಾದ ಕಾಲೇಜು ತನ್ನ ಸಾರ್ಥಕ 50 ಸಂವತ್ಸರಗಳನ್ನು ಪೂರೈಸಿ ಸುವರ್ಣ ಸಂಭ್ರಮ ಆಚರಿಸಿಕೊಂಡಿದೆ. ಹಿರಿಯ ಜಗದ್ಗುರುಗಳ ಆಶೀರ್ವಾದ ಹಾಗೂ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ಸೂಕ್ತ ಮಾರ್ಗದರ್ಶನ, ಜೆಎಸ್‌ಎಸ್ ಮಹಾವಿದ್ಯಾಪೀಠದವರ ಬೆಂಬಲ, ಕೇಂದ್ರ ಮತ್ತು ಕರ್ನಾಟಕ ಸರ್ಕಾರಗಳು, ಮೈಸೂರು ವಿಶ್ವವಿದ್ಯಾನಿಲಯ, ಯುಜಿಸಿ ಮೊದಲಾದವುಗಳ ನೆರವು ಮತ್ತು ಸಹಕಾರದಿಂದ ಇಂದು ಈ ಕಾಲೇಜು ದೇಶದಲ್ಲಿರುವ ಒಟ್ಟು 3700 ಕಾಲೇಜುಗಳಲ್ಲಿ ಶೈಕ್ಷಣಿಕ ಸ್ವಾಯತ್ತತೆ ಪಡೆದಿರುವ 69 ಕಾಲೇಜುಗಳಲ್ಲಿ ಒಂದಾಗಿದೆ. ಅಷ್ಟೇ ಅಲ್ಲ, ಯುಜಿಸಿಯಿಂದ ಅಂತಸ್ಸಾಮರ್ಥ್ಯ ಉತ್ಕೃಷ್ಟತಾ ಸಾಮರ್ಥ್ಯವುಳ್ಳ 250 ಕಾಲೇಜುಗಳಲ್ಲಿ ಒಂದಾಗಿದೆ. ರಾಷ್ಟ್ರದಲ್ಲಿ ಯುಜಿಸಿಯಿಂದ ದೀನ್ ದಯಾಳ್ ಕೌಶಲ್ ಕೇಂದ್ರ ಪಡೆದ 50 ಕಾಲೇಜಿನಲ್ಲಿ ಈ ಕಾಲೇಜು ಒಂದಾಗಿದೆ. ಇದಲ್ಲೆದರಲ್ಲಿ ಕಾಲೇಜಿನ ದಕ್ಷ ಮತ್ತು ಪ್ರಾಮಾಣಿಕ ಪ್ರಾಂಶುಪಾಲರುಗಳು, ನಿಷ್ಠಾವಂತ ನೌಕರ ವರ್ಗ, ವಿದ್ಯಾರ್ಥಿ ಸಮುದಾಯದ ಸಹಕಾರವನ್ನು ಮರೆಯುವಂತಿಲ್ಲ.

## ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆ
## ಕೆ.ಆರ್. ನಗರ, ಮೈಸೂರು ಜಿಲ್ಲೆ

ಮೈಸೂರು ಜಿಲ್ಲೆಯ ಭತ್ತದ ಕಣಜ ಎಂದೇ ಪ್ರಸಿದ್ಧಿಯಾಗಿರುವ ಕೆ.ಆರ್.ನಗರವು ಹಲವು ಪ್ರಖ್ಯಾತ ಸಾಹಿತಿಗಳನ್ನು ನಾಡಿಗೆ ನೀಡಿದೆ. ಇಂತಹ ಸಾಂಸ್ಕೃತಿಕ ನಾಡಿಗೆ ಶಿಕ್ಷಣ ದಾಸೋಹವನ್ನು ಎರೆದವರು ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು. ಪೂಜ್ಯರ ಕೃಪಾಶೀರ್ವಾದಗಳಿಂದ 1.6.1979 ರಲ್ಲಿ ಜೆಎಸ್‌ಎಸ್ ಸಂಸ್ಕೃತ ಪಾಠಶಾಲೆಯು ಸ್ಥಾಪನೆಗೊಂಡಿತು. ಅಂದು 25 ವಿದ್ಯಾರ್ಥಿಗಳು ಹಾಗೂ ಒಬ್ಬ ಅಧ್ಯಾಪಕರನ್ನು ಹೊಂದಿದ್ದ ಈ ಶಾಲೆಯಲ್ಲಿ ಇಂದು 86ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಿದ್ದಾರೆ. ಶಾಲೆಯು ಆರಂಭದಿಂದಲೂ ಪಠ್ಯ ಹಾಗೂ ಪಠ್ಯೇತರ ಚಟುವಟಿಕೆಗಳಿಗೆ ಸಮಾನ ಅವಕಾಶಗಳನ್ನು ಕಲ್ಪಿಸಿದ್ದು, ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಶ್ರಮಿಸುತ್ತಿದೆ. ನಗರದ ಕೇಂದ್ರಭಾಗದಲ್ಲಿರುವ ಸಂಸ್ಕೃತ ಪಾಠಶಾಲೆಯು ಉತ್ತಮ ಕಟ್ಟಡ ಹಾಗೂ ಒಳ್ಳೆಯ ಪರಿಸರವನ್ನು ಹೊಂದಿದೆ. ಗ್ರಾಮೀಣ ಬಡ ವಿದ್ಯಾರ್ಥಿಗಳಿಗಾಗಿ ಅನಾಥಾಲಯವನ್ನು ನಡೆಸುತ್ತಿದೆ.

ಶಾಲೆಯಲ್ಲಿ ಸಂಸ್ಕೃತ ಪ್ರಥಮ, ಒಂದು ಮತ್ತು ಎರಡು ಹಾಗೂ ಮೂರನೇ ತರಗತಿಗಳನ್ನು ನಡೆಸಲಾಗುತ್ತಿದೆ. ಉತ್ತಮ ಗುಣಮಟ್ಟದ ಕಂಪ್ಯೂಟರ್ ಶಿಕ್ಷಣವನ್ನು ನೀಡಲಾಗುತ್ತಿದೆ. ಪ್ರತೀ ವರ್ಷವು ಉತ್ತಮ ಫಲಿತಾಂಶ ಪಡೆಯುತ್ತಿದೆ. ಶಾಲೆಯಲ್ಲಿ ಕಲಿತ ವಿದ್ಯಾರ್ಥಿಗಳು ಉನ್ನತ ವ್ಯಾಸಂಗವನ್ನು ಪಡೆದು ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದವರಿದ್ದಾರೆ.

## ಎಸ್‌ಎಸ್‌ಎಲ್‌ಸಿ ಫಲಿತಾಂಶ

ಜೆಎಸ್‌ಎಸ್ ಮಹಾವಿದ್ಯಾಪೀಠದ ವ್ಯಾಪ್ತಿಯಲ್ಲಿ ಬರುವ 62 ಪ್ರೌಢಶಾಲೆಗಳ ಎಸ್‌ಎಸ್‌ಎಲ್‌ಸಿಯ ಒಟ್ಟು ಫಲಿತಾಂಶವು ಶೇ 79.03 ರಷ್ಟಿದ್ದು ಕನ್ನಡ ಭಾಷಾ ವಿಷಯದಲ್ಲಿ 20, ಹಿಂದಿ ಭಾಷಾ ವಿಷಯದಲ್ಲಿ 25, ಸಮಾಜ ವಿಜ್ಞಾನದಲ್ಲಿ 7, ಸಂಸ್ಕೃತ ಭಾಷೆ ಮತ್ತು ಗಣಿತದಲ್ಲಿ ತಲಾ ಓರ್ವ ವಿದ್ಯಾರ್ಥಿಗಳು ಶೇ100ರಷ್ಟು ಫಲಿತಾಂಶವನ್ನು ಪಡೆದಿರುತ್ತಾರೆ.

ಹೆಚ್.ಡಿ ಕೋಟೆ ತಾಲೂಕಿನ ಸರಗೂರಿನಲ್ಲಿರುವ ಆಂಗ್ಲ ಮಾಧ್ಯಮ ಜೆಎಸ್‌ಎಸ್ ಪ್ರೌಢಶಾಲೆ, ಹನೂರು ತಾಲೂಕಿನ ಅಜ್ಜೀಪುರದಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆ, ರಾಮಾಪುರದಲ್ಲಿರುವ ಆಂಗ್ಲ ಮಾಧ್ಯಮ ಮತ್ತು ಕನ್ನಡ ಮಾಧ್ಯಮದ ಜೆಎಸ್‌ಎಸ್ ಪ್ರೌಢಶಾಲೆಗಳು, ಕೊಳ್ಳೇಗಾಲ ತಾಲೂಕಿನ ಕಾಮಗೆರೆಯಲ್ಲಿರುವ ಶ್ರೀ ಮಹದೇಶ್ವರ ಜೆಎಸ್‌ಎಸ್ ಪ್ರೌಢಶಾಲೆ, ಚಾಮರಾಜನಗರ ತಾಲೂಕಿನ ಅರಕಲವಾಡಿಯಲ್ಲಿರುವ ಜೆಎಸ್‌ಎಸ್ ಪ್ರೌಢಶಾಲೆ, ಕೋಲಾರ ಜಿಲ್ಲೆ ಮಾಲೂರು ತಾಲೂಕಿನ ಆಂಗ್ಲಮಾಧ್ಯಮ ಜೆಎಸ್‌ಎಸ್ ಪ್ರೌಢಶಾಲೆ, ಚಾಮರಾಜನಗರದ ತಾಳವಾಡಿಯ ಜೆಎಸ್‌ಎಸ್ ಮೆಟ್ರಿಕ್ಯುಲೇಷನ್ ಶಾಲೆಗಳು ಶೇ. 100ರಷ್ಟು ಫಲಿತಾಂಶವನ್ನು ಪಡೆದಿವೆ.

### ಶಾಲಾವಾರು ಅತಿ ಹೆಚ್ಚು ಅಂಕ ಪಡೆದವರ ವಿವರ

ಜೆಎಸ್‌ಎಸ್
ಬಾಲಕಿಯರ ಪ್ರೌಢಶಾಲೆ
ಚಾಮರಾಜನಗರ



**ಬಿ. ಕೀರ್ತನಾ**
614 (98.24%)

ಜೆಎಸ್‌ಎಸ್ ಪ್ರೌಢಶಾಲೆ
ಯಳಂದೂರು



**ಎಂ. ಮಧುಶ್ರೀ**
614 (98.24%)

ಜೆಎಸ್‌ಎಸ್
ಆಂಗ್ಲ ಮಾಧ್ಯಮ ಪ್ರೌಢಶಾಲೆ
ಮೇಟಗಳ್ಳಿ, ಮೈಸೂರು



**ಎನ್.ಎಂ. ಭೂಮಿಕ**
600 (96%)

ಜೆಎಸ್‌ಎಸ್
ಆಂಗ್ಲ ಮಾಧ್ಯಮ ಪ್ರೌಢಶಾಲೆ
ಮೇಟಗಳ್ಳಿ, ಮೈಸೂರು



**ಡಿ.ಎಸ್. ಸುಹಾಸ್**
600 (96%)

ಜೆಎಸ್‌ಎಸ್ ಬಾಲಕಿಯರ
ಆಂಗ್ಲ ಮಾಧ್ಯಮ ಪ್ರೌಢಶಾಲೆ
ನಂಜನಗೂಡು



**ಭಾಗ್ಯಶ್ರೀ**
596 (95.36%)

ಜೆಎಸ್‌ಎಸ್ ಆಂಗ್ಲ ಮಾಧ್ಯಮ
ಪ್ರೌಢಶಾಲೆ, ರಾಮಾಪುರ
ಹನೂರು ತಾಲ್ಲೂಕು



**ಯು. ಸೌಜನ್ಯ**
592 (94.72%)

ಜೆಎಸ್‌ಎಸ್ ಪ್ರೌಢಶಾಲೆ
ದೇವಲಾಪುರ
ಮೈಸೂರು ತಾಲ್ಲೂಕು



**ಎಸ್. ಯಶವಂತ್**
591 (94.56%)

ಜೆಎಸ್‌ಎಸ್ ಪ್ರೌಢಶಾಲೆ
ಗೌಡಹಳ್ಳಿ
ಯಳಂದೂರು ತಾಲ್ಲೂಕು



**ಎಂ. ಮಹೇಶ್ವರಿ**
590 (94.4%)

ಜೆಎಸ್‌ಎಸ್ ಪ್ರೌಢಶಾಲೆ
ಚಾಮರಾಜನಗರ



**ಜಿ. ಮೋನಿಷಾ ರಾಣಿ**
585 (93.6%)

ಜೆಎಸ್‌ಎಸ್
ಶಿಶುನಾಳ ಶರೀಫ ಪ್ರೌಢಶಾಲೆ
ಉದಯಗಿರಿ
ಮೈಸೂರು



**ಎಚ್.ಎನ್. ನಾಗಮ್ಮ**
581 (92.96%)

ಜೆಎಸ್‌ಎಸ್
ಬಾಲಕರ ಪ್ರೌಢಶಾಲೆ
ಚಾಮರಾಜನಗರ



**ಎಸ್.ಎನ್. ಚೇತನ್**
581 (92.96%)

ಜೆಎಸ್‌ಎಸ್ ಪ್ರೌಢಶಾಲೆ
ಅಜ್ಜೀಪುರ
ಹನೂರು ತಾಲ್ಲೂಕು



**ತಸ್ಮಿಯಾ ಬಾನು**
578 (92.48%)

ಜೆಎಸ್‌ಎಸ್ ಪ್ರೌಢಶಾಲೆ
ರಾಮಾಪುರ
ಹನೂರು ತಾಲ್ಲೂಕು



**ಆಸೀಫ್ ವಾಲಿಕಾರ್**
568 (90.88%)

ಜೆಎಸ್‌ಎಸ್
ಬಾಲಜಗತ್ ಪ್ರೌಢಶಾಲೆ
ಮೈಸೂರು



**ಎಸ್. ಬಸವ ಪ್ರಭು**
566 (90.56%)

ಜೆಎಸ್‌ಎಸ್ ಪ್ರೌಢಶಾಲೆ
ಕಲ್ಕುಣಿಕೆ
ಹುಣಸೂರು ತಾಲ್ಲೂಕು



**ಕೆ.ವಿ. ಐಶ್ವರ್ಯ**
549 (87.84%)

ಜೆಎಸ್‌ಎಸ್ ಪ್ರೌಢಶಾಲೆ
ಮಾಗನೂರು
ಮಳವಳ್ಳಿ ತಾಲ್ಲೂಕು



**ಎಂ.ಎಸ್. ಸಿಂಧು**
548 (87.68%)

ಜೆಎಸ್‌ಎಸ್ ಪ್ರೌಢಶಾಲೆ
ಹಳ್ಳಿಕೆರೆಹುಂಡಿ
ಚಾಮರಾಜನಗರ
ತಾಲ್ಲೂಕು



**ಡಿ. ಸೌಂದರ್ಯ**
547 (87.52%)

ಜೆಎಸ್‌ಎಸ್ ಪ್ರೌಢಶಾಲೆ
ಸಿದ್ಧಾರ್ಥನಗರ
ಮೈಸೂರು



**ಬಿ. ನಾಗೇಂದ್ರ**
538 (86.08%)

ಜೆಎಸ್‌ಎಸ್ ಪ್ರೌಢಶಾಲೆ
ಉಡಿಗಾಲ
ಚಾಮರಾಜನಗರ ತಾಲ್ಲೂಕು



**ಎಂ. ಅಶ್ವಿನಿ**
536 (85.76%)

ಜೆಎಸ್‌ಎಸ್ ಪ್ರೌಢಶಾಲೆ
ತೆರಕಣಾಂಬಿ
ಗುಂಡ್ಲುಪೇಟೆ ತಾಲ್ಲೂಕು



**ಸಿ.ಎಸ್. ರಶ್ಮಿ**
525 (84%)

ಶ್ರೀ ಮದ್ದಾನೇಶ್ವರ
ಜೆಎಸ್‌ಎಸ್ ಪ್ರೌಢಶಾಲೆ
ಪಡಗೂರು
ಗುಂಡ್ಲುಪೇಟೆ ತಾಲ್ಲೂಕು



**ಬಿ. ಮನೋಜ್**
514 (82.24%)

ಜೆಎಸ್‌ಎಸ್ ಪ್ರೌಢಶಾಲೆ
ದೊಡ್ಡಕಾಡನೂರು
ಹೊಳೆನರಸೀಪುರ ತಾಲ್ಲೂಕು



**ಎಂ.ಜೆ. ರೂಪ**
512 (81.92%)

ಜೆಎಸ್‌ಎಸ್ ಪ್ರೌಢಶಾಲೆ
ರಾಘವೇಂದ್ರ ನಗರ
ಮೈಸೂರು



**ಎಂ. ಧನುಷ್**
509 (81.44%)

ಜೆಎಸ್‌ಎಸ್ ಪ್ರೌಢಶಾಲೆ
ಸಂತೇಮರಹಳ್ಳಿ
ಚಾಮರಾಜನಗರ ತಾಲ್ಲೂಕು



**ಎಂ. ಕಾವ್ಯ**
505 (80.80%)

ಜೆಎಸ್‌ಎಸ್ ಪ್ರೌಢಶಾಲೆ
ಶಕ್ತಿನಗರ
ಮೈಸೂರು



**ಎನ್. ಬಾಲಾಜಿ**
500 (80%)

ಜೆಎಸ್‌ಎಸ್ ಪ್ರೌಢಶಾಲೆ
ಶ್ರೀರಾಂಪುರ
ಮೈಸೂರು



**ಆರ್. ಸಂಗೀತ**
486 (77.76%)

# INDEPENDENCE DAY CELEBRATED




The 74th Independence Day was celebrated with great enthusiasm and fervour at JSS Public School, Teachers' Layout, Mysuru 15.8.2020. The ceremony started at 9 am in the school open ground with the teaching and non-teaching staff.

The President of the day's function Smt M. Asha, Principal of the School, was escorted by P.E teacher Sri Santhosh Kumar. She hoisted the national flag. All the teachers and students saluted the flag and then sang the National Anthem.

Smt Usha Devi, KG teacher, welcomed the gathering and spoke about the significance of the historic day.

Smt M. Ambika, Assistant Teacher shared her views on the importance of the day in Kannada. She quoted the words of Lokmanya Tilak "Swaraj is my birthright and I shall have it", in her speech.

Smt Asha, Principal delivering her speech, stressed that a teacher should prepare their students to deliver the goods, as responsible citizen. She quoted the words of Netaji Subhashchandra Bose "one individual may die for an idea, but that idea will incarnate itself in a thousand lives". that means we are the human incarnation of the ideas that our ancestors had thought of. So, we have to remember the sacrifices of our great leaders who strived hard to get independence to our country.

The programme concluded up with Vote of Thanks by Smt Kumari, Assistant Teacher, At the end of the ceremony, sweets were distributed among the teaching and non-teaching staff.

# "Conserve Forest and Protect Wildlife"

- Jagadguru Sri Shivarathri Deshikendra Mahaswamiji

Today, the 'Prakruthi Vandanam' - Salutation to Nature - is being organized by the Hindu Spiritual and Service Foundation and Initiative For Moral and Cultural Foundation is not only pertinent, but also salubrious, especially at these extraordinary times of human crisis due to COVID pandemic, where the humanity is at the crossroads of its very existence. The civilization is staring at its own destruction by nature. The divine nature is expressing its wrath through all these elements against merciless destruction. It appears that the humanity is yet too far from comprehending the art of understanding the nature. It is not the revenge of the Mother Earth, but repulsion against the cruel assault on the bountiful nature. The pandemic is the clear signal of total destruction the civilization is bound to face anytime soon. the programme 'Prakruthi Vandanam' is an attempt to restore sanity in the social structure to reset its goal of economic development without harming the nature. The conservation of forest and protection of wild life is one amongst its series of activities.

The Hindu civilization was acknowledged as the pinnacle of human civilization on the planet earth. The ancient rishis had intuitively grasped the secrets of life on earth and elsewhere, which the present scientific world is yet to understand in its totality. Every creation, according Hindu culture, both living and non-living, at the elemental level, consisted of five elements called '*Pancha Bhoothas*'. The nature was nothing but a vivid expression of it in myriad forms, where human being is just a small a speck in the backdrop of creation. Hence, worshipping of nature in us is an innate and inborn quality. Not only every plant, animal and insect was an expression of divinity; every river and mountain was sacred. Sacred texts of the ancient exemplified the power of nature and worshipping it in every form was daily ritual for man.

The spiritual literature is striking in its description of this uniqueness of nature. The nature is an inseparable part of human life in India and reverence to the nature was the highest form of worship.

---

His Holiness Swamiji's Speach at Hindu Spiritual and Service Foundation & Initiative for Moral and Cultural Foundation

In one of the Vachanas, Akkamahadevi brings it out sensibly: "The water, earth and air are the same, but a plant in its shape, colour, size and its flower or fruit are intensely vivid. If not the God, who else can be the cause of such infinite expression" Similarly, the idea of nature worship was a deep-seated culture of our ancestors. Sri Basaveshwara, in one of his vachanas, shows how deep is the devotion of man towards nature when he says "men would take a holy dip in every river they came across; they would circumambulate every tree they chanced upon." Thus the God was seen in every element of nature and life of man was inseparably bonded with nature. Undoubtedly, man is dependent on nature for his very existence and survival, without Pancha Bhoothas life on earth is unimaginable; so shall be his reverence and responsibility towards the nature. He has to respect nature to help himself.

But during the course of evolution, the human mind was exposed to corruption, and the man thought that he was his body and mind. Thus began the decline of civilization. The nature became bounty hunters' target of exploitation. The sacred Ganga got polluted, mountains became source of raw material and the trees became timber.

As Mahatma Gandhiji said "The nature can satisfy all the needs of a man, but not his greed". The greed in man is the biggest viral attack on humanity; if not vaccinated soon, it would devour the very humanity. Planting trees, as part reforestation, by everyone should be a ritual like the Morning Prayer. The gradual changes in the earth cannot be prevented, but can be contained by these concerted efforts. The global warming, ozone depletion, ocean rising, soil erosion, erratic rainfall etc., are planetary changes for various disturbing activities of living organisams of the planet. If man learns to live with nature rather than living off nature; it bounces back with abundance. Henceforth, humanity must consider that it is part of nature and every other living and non-living thing is a partner on the planet. And, our mantra for existence is. "Together we flourish, divided we perish".

Serving all the living objects should be the inherited culture of human beings. The cause of Hindu Seva Prathisthana and Initiative For Moral and Cultural Foundation, through its 'Prakruthi Vandanam' is a sacred duty of everyone, and we urge everyone to be part of this blessed journey.

□



ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಮಹೋತ್ಸವದ ಅಂಗವಾಗಿ ಶ್ರೀಗಳವರ ಪುತ್ಥಳಿಗೆ ಪುಷ್ಪಾರ್ಚನೆ ಹಾಗೂ ಮಹಾಮಂಗಳಾರತಿ ನೆರವೇರಿಸಲಾಯಿತು. ಈ ಸಂದರ್ಭದಲ್ಲಿ ಜೆಎಸ್ಎಸ್ ಸಂಸ್ಥೆಯ ಮುಖ್ಯಸ್ಥರು ಹಾಗೂ ನೌಕರ ವರ್ಗದವರು





ಕನ್ನಡ ಪುಸ್ತಕ ಆಯ್ಕೆ ಸಮಿತಿಯ ಸದಸ್ಯರಾಗಿ ನೇಮಕವಾಗಿರುವ ನಿವೃತ್ತ ಪ್ರಾಂಶುಪಾಲರಾದ ಪ್ರೊ. ನಿ. ಗಿರಿಗೌಡರವರು ಮತ್ತು ಸಂವಹನ ಪ್ರಕಾಶನದ ಶ್ರೀ ಡಿ.ಎನ್. ಲೋಕಪ್ಪನವರನ್ನು ಸುತ್ತೂರು ಶ್ರೀಮಠದ ವತಿಯಿಂದ ಅಭಿನಂದಿಸಲಾಯಿತು. ಚಿತ್ರದಲ್ಲಿ ಪ್ರೊ. ಮೊರಬದ ಮಲ್ಲಿಕಾರ್ಜುನ, ಶ್ರೀ ವೀರಭದ್ರಸ್ವಾಮಿ, ಶ್ರೀ ಎಂ.ಡಿ. ಗುರುಸಿದ್ಧಪ್ಪ, ಶ್ರೀ ಎನ್.ಆರ್. ಶಿವಕುಮಾರ ಅವರುಗಳಿದ್ದಾರೆ

ಪ್ರಧಾನಮಂತ್ರಿ ಬ್ಯಾನರ್ ಪ್ರಶಸ್ತಿಗೆ ಭಾಜನರಾದ ಕೋಲಾರ ಜಿಲ್ಲೆಯ ಮಾಲೂರಿನ ಜೆಎಸ್ಎಸ್ ಪಬ್ಲಿಕ್ ಶಾಲೆಯ ಎನ್‌ಸಿಸಿ ವಿದ್ಯಾರ್ಥಿಗಳಾದ ಎಂ.ವಿ. ಮೋಹಿತ್ ಮಹರ್ಷಿ ಮತ್ತು ಎಂ. ಕುಶಾಲ್‌ಗೌಡ ಇವರನ್ನು ತಾಲ್ಲೂಕು ಆಡಳಿತದ ವತಿಯಿಂದ ನಡೆದ 73ನೆಯ ಸ್ವಾತಂತ್ರ್ಯ ದಿನಾಚರಣೆಯ ಕಾರ್ಯಕ್ರಮದಲ್ಲಿ ಮಾಲೂರು ಶಾಸಕರಾದ ಶ್ರೀ ಕೆ.ವೈ ನಂಜೇಗೌಡ ಅವರು ಅಭಿನಂದಿಸಿ ಅಭಿನಂದನಾ ಪತ್ರ ನೀಡಿದರು



Registered with the Registrar of Newspapers for India No. KARBIL/2014/66470
'JSS Varthapathra' Monthly, Vol. 5, Issue No. 9, September 2020




ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಅಂಗವಾಗಿ ಕೋವಿಡ್–19 ಸವಾಲು ಹಾಗೂ ಸ್ಥೈರ್ಯದ ನಿರ್ವಹಣೆ ಕುರಿತು ಏರ್ಪಡಿಸಿದ್ದ ಆನ್‌ಲೈನ್ ಸಂವಾದದಲ್ಲಿ ಪೂಜ್ಯ ಶ್ರೀಗಳವರು, ಧರ್ಮಾಧಿಕಾರಿಗಳಾದ ಶ್ರೀ ಡಿ. ವೀರೇಂದ್ರ ಹೆಗ್ಗಡೆಯವರು, ಜಮ್ಮು ಮತ್ತು ಕಾಶ್ಮೀರದ ರಾಜ್ಯಪಾಲರಾದ ಸನ್ಮಾನ್ಯ ಡಾ. ಮನೋಜ್ ಸಿನ್ಹರವರು, ಶ್ರೀಮತಿ ಸುಧಾ ಮೂರ್ತಿಯವರು, ಸಚಿವರಾದ ಡಾ. ಕೆ. ಸುಧಾಕರ್‌ರವರು, ಕಲಾವಿದರಾದ ಶ್ರೀ ದರ್ಶನ್ ತೂಗುದೀಪರವರು ಹಾಗೂ ಡಾ. ಬಿ. ಸುರೇಶ್‌ರವರಿದ್ದಾರೆ



ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿಯಂದು ನಡೆದ ಪೂಜೆ ಮತ್ತು ಆರತಿಯನ್ನು ಆನ್‌ಲೈನ್ ಮೂಲಕ ವೀಕ್ಷಿಸುತ್ತಿರುವ ಮಾನ್ಯ ಮುಖ್ಯಮಂತ್ರಿಗಳು ಮತ್ತು ಗಣ್ಯರು



ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 105ನೆಯ ಜಯಂತಿ ಕಾರ್ಯಕ್ರಮದಲ್ಲಿ ಕೃತಿಗಳನ್ನು ಆನ್‌ಲೈನ್ ಮೂಲಕ ಲೋಕಾರ್ಪಣೆ ಮಾಡಿದ ವಿರೋಧಪಕ್ಷದ ನಾಯಕರಾದ ಶ್ರೀ ಸಿದ್ದರಾಮಯ್ಯನವರು

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821-2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು